

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ



ಜಾಹೀರಾತಿಗಾಗಿ ಸಂಪರ್ಕಿಸಿ

9663122276

www.munjanevarthe.com



VOLUME : 2 ISSUE: 127 ಸಂಪುಟ: 02 ಸಂಚಿಕೆ: 127 ಪುಟಗಳು: 04 munjanevarthe 20 THURSDAY JUNE 2024 20 ಗುರುವಾರ ಜೂನ್ 2024 ₹ 2


ಬಿಜೆಪಿ ಮಂಡಲದ ವತಿಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ಚಳವಳಿ ವಿವರಪುಟ 02

ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಕೋಟ್ಯಾಂತರ ರೂ. ಅನುದಾನ ವಿವರಪುಟ 03

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧತೆಯಿಂದ ಕೆಲಸ ಮಾಡುವೆ ಎಂದು ಶಾಸಕ ಹೆಚ್.ಟಿ.ಮಂಜು ವಿವರಪುಟ 04

# 14 ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿದ ಕೇಂದ್ರ



ನವದೆಹಲಿ: ಮುಂಗಾರು ಹಂಗಾಮಿನ ಭತ್ತ, ರಾಗಿ, ಜೋಳ, ಸಜ್ಜೆ, ಮೆಕ್ಕೆಜೋಳ ಮತ್ತು ಹತ್ತಿ ಸೇರಿದಂತೆ 14 ಬೆಳೆಗಳಿಗೆ ಕೇಂದ್ರ ಸರ್ಕಾರ ಬುಧವಾರ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಎಂಎಸ್‌ಪಿಗೆ ಅನುಮೋದನೆ ನೀಡಿತು. ಖಾರಿಫ್ ಬೆಳೆಗಳಿಗೆ ಎಂಎಸ್‌ಪಿ, ಉತ್ತರ ಪ್ರದೇಶದ ವಾರಣಾಸಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಅಭಿವೃದ್ಧಿ, ಮಹಾರಾಷ್ಟ್ರದಲ್ಲಿ 76,000 ಕೋಟಿ ರ1ೂ. ವೆಚ್ಚದ ವಧವನ್ ಬಂದರು ಯೋಜನೆ ಸೇರಿದಂತೆ ಐದು ಪ್ರಮುಖ ನಿರ್ಧಾರಗಳನ್ನು ಕೇಂದ್ರ ಸಂಪುಟ ತೆಗೆದುಕೊಂಡಿದೆ.

ಖಾರಿಫ್ ಹಂಗಾಮು ಆರಂಭವಾಗುತ್ತಿದ್ದು, ರೈತರ ಹಿತದೃಷ್ಟಿಯಿಂದ 14 ಬೆಳೆಗಳ ಎಂಎಸ್‌ಪಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಎಂಎಸ್‌ಪಿಯಿಂದ ಸರ್ಕಾರಕ್ಕೆ ಎರಡು ಲಕ್ಷ ಕೋಟಿ ರೂಪಾಯಿಗಳ ಆರ್ಥಿಕ ಹೊರೆಯಾಗಲಿದೆ. ಹಿಂದಿನ ಹಂಗಾಮಿನಲ್ಲಿ ಹೋಲಿಸಿದರೆ ರೈತರಿಗೆ 35,000 ಕೋಟಿ ರೂಪಾಯಿಗಳ ಲಾಭವಾಗಲಿದೆ. ಎಣ್ಣೆಕಾಳುಗಳು ಮತ್ತು ದ್ವಿದಳ ಧಾನ್ಯಗಳಿಗೆ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಎಂಎಸ್‌ಪಿ ಶಿಫಾರಸು ಮಾಡಲಾಗಿದೆ. ಗೂರೆಳ್ಳು (ಕಪ್ಪು ಎಳ್ಳು) ಕ್ವಿಂಟಲ್‌ಗೆ 983 ರೂ., ಎಳ್ಳು ಕ್ವಿಂಟಲ್‌ಗೆ 632 ಮತ್ತು ತೊಗರಿ ಬೇಳೆ, ಮಸೂರು ಬೇಳೆ ಕ್ವಿಂಟಲ್‌ಗೆ 550 ರೂ. ಹೊಸ ಎಂಎಸ್?ಪಿ ನಿಗದಿ ಮಾಡಲಾಗಿದೆ. ಭತ್ತಕ್ಕೆ ಹೊಸ ಎಂಎಸ್‌ಪಿ ಕ್ವಿಂಟಲ್‌ಗೆ 2,300 ರೂ.ಗಳಾಗಿದ್ದು, ಹಿಂದಿನ ಬೆಲೆಗಿಂತ 117 ರೂ. ಹೆಚ್ಚಳ ಮಾಡಲಾಗಿದೆ. ಹತ್ತಿಯ ಎಂಎಸ್‌ಪಿಯನ್ನು 501 ರೂ. ಹೆಚ್ಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

## ಜುಲೈ 8ರಂದು ಪುರಿ ಜಗನ್ನಾಥ ರತ್ನ ಭಂಡಾರದ ಬೀಗ ಓಪನ್

ಭುವನೇಶ್ವರ: ಪುರಿ ಜಗನ್ನಾಥ ದೇವಾಲಯದ ರತ್ನ ಭಂಡಾರವನ್ನು ಜುಲೈ 8ರಂದು ತೆರೆಯಲಾಗುವುದು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ. ಒಂಬತ್ತು ದಿನಗಳ ವಾರ್ಷಿಕ ಜಗನ್ನಾಥ ರಥೋತ್ಸವಕ್ಕೂ ಮುನ್ನ ರತ್ನ ಭಂಡಾರದ ಬಾಗಿಲುಗಳು ತೆರೆಯಲಿವೆ.

ಜುಲೈ 7ರಂದು ಮೂರು ರಥಗಳು ದೇವಾಲಯದ ಗರ್ಭಗುಡಿಯಿಂದ ಹೊರಟು ಒಂಬತ್ತು ದಿನಗಳ ಪ್ರವಾಸವನ್ನು (ರಥಯಾತ್ರೆ



ಉತ್ಸವ) ಪ್ರಾರಂಭಿಸಲಿವೆ.

ರತ್ನ ಭಂಡಾರದ ಕೀಗಳು ಕಾಣೆಯಾಗಿರುವ ವಿಷಯ ಇತ್ತೀಚೆಗೆ ಮುಕ್ತಾಯಗೊಂಡ ಚುನಾವಣೆಯಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಸದ್ದು ಮಾಡಿತ್ತು. ಕಾಣೆಯಾದ ಕೀಗಳ ಹಿಂದಿನ ರಹಸ್ಯದ ಬಗ್ಗೆ ತನಿಖೆ ನಡೆಸುವುದಾಗಿ ಮತ್ತು ಪಕ್ಷವು ಚುನಾವಣೆಯಲ್ಲಿ ಗೆದ್ದರೆ ರತ್ನ ಭಂಡಾರದಲ್ಲಿ ಸಂಗ್ರಹವಾಗಿರುವ ಆಭರಣಗಳ ದಾಖಲೆಯನ್ನು ತಯಾರಿಸುವುದಾಗಿ ಆಡಳಿತಾರೂಢ ಭಾರತೀಯ ಜನತಾ ಪಕ್ಷವು (ಬಿಜೆಪಿ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿತ್ತು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ತಾಂತ್ರಿಕ ಕೋರ್ ಸಂರಕ್ಷಣಾ ಸಮಿತಿ ಮತ್ತು ರಾಜ್ಯ ಸರ್ಕಾರ ರಚಿಸಿದ 12 ಸದಸ್ಯರ ರತ್ನ ಭಂಡಾರ ಸಮಿತಿಯ ಉಪಸ್ಥಿತಿಯಲ್ಲಿ ಜುಲೈ 8ರಂದು ರತ್ನ ಭಂಡಾರವನ್ನು ತೆರೆಯಲಾಗುವುದು.

12ನೇ ಶತಮಾನದ ದೇವಾಲಯದ ಖಜಾನೆಯ ಸ್ಥಿತಿಯ ಪರಿಶೀಲನೆ ಮತ್ತು ಮೌಲ್ಯಮಾಪನದ ನಂತರ,

ರತ್ನ ಭಂಡಾರದ ಸಂರಕ್ಷಣೆ ಮತ್ತು ಸಂರಕ್ಷಣೆಗೆ ಅಗತ್ಯವಿರುವ ತಕ್ಷಣದ ಕ್ರಮಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು" ಎಂದು ಎಎಸ್‌ಐನ ಅಧೀಕ್ಷಕ ಪುರಾತತ್ವ ಶಾಸ್ತ್ರಜ್ಞ ಡಿ.ಬಿ.ಗರ್ನಾಯಕ್ ಹೇಳಿದರು.

## ಚಾಮರಾಜನಗರ ಜಿಲ್ಲೆಯಲ್ಲಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ 1,400 ಕೋಟಿ ರೂ. ಉದ್ಯಮ, ಸಿಗಲಿದೆ ಹಲವರಿಗೆ ಉದ್ಯೋಗ

ಚಾಮರಾಜನಗರ: ಶ್ರೀಲಂಕಾ ಕ್ರಿಕೆಟಿಗ ಮುತ್ತಯ್ಯ ಮುರಳೀಧರ್ ಯಾರಿಗೆ ಗೊತ್ತಿಲ್ಲ. ಗೂಗ್ಲಿ ಬೌಲಿಂಗ್ ಹಾಗೂ ವಿಭಿನ್ನ ಹಾವಭಾವದ ಮೂಲಕ ಗಮನ ಸೆಳೆದಿದ್ದ ಅಂತರಾಷ್ಟ್ರೀಯ ಕ್ರಿಕೆಟಿಗ ಈಗ ಉದ್ಯಮಿ.



ಆಹಾರೋದ್ಯಮಕ್ಕೆ ಸಂಬಂಧಿಸಿ ಅವರು ಉದ್ಯಮವನ್ನು ನಡೆಸುತ್ತಿದ್ದು,. ಕರ್ನಾಟಕದಲ್ಲಿ ಉದ್ಯಮ ವಿಸ್ತರಿಸುತ್ತಿದ್ದಾರೆ. ಕರ್ನಾಟಕದ ಗಡಿ ಜಿಲ್ಲೆ ಚಾಮರಾಜನಗರವನ್ನು ಅವರು ಆಯ್ಕೆ ಮಾಡಿಕೊಂಡಿದ್ದಾರೆ. ಚಾಮರಾಜನಗರದಿಂದ ಸ್ವಲ್ಪವೇ ದೂರದಲ್ಲಿರುವ ಬದನಗುಪ್ಪೆಯಲ್ಲಿ ಶ್ರೀಲಂಕಾದ ಖ್ಯಾತ ಕ್ರಿಕೆಟ್ ಆಟಗಾರ ಮುತ್ತಯ್ಯ ಮುರಳೀಧರನ್ ತಂಪು ಪಾನೀಯ ಮತ್ತು ಸಿಹಿತಿಂಡಿಗಳ ಉದ್ಯಮ ಆರಂಭಿಸುತ್ತಿದ್ದು, ಹಂತಹಂತವಾಗಿ ಒಟ್ಟು 1,400 ಕೋಟಿ ರೂ. ಹೂಡಿಕೆ

ಪುಟ 2ಕ್ಕೆ

## "ಒಂದೇ ಭಾರತ್" ರೈಲಿಗೆ ಅನುಕೂಲವಾಗುವಂತೆ ಯೋಜನೆ ಸಿದ್ಧಪಡಿಸುವಂತೆ ಸೂಚನೆ



ಶಿವಮೊಗ್ಗದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ರೈಲ್ವೇ ಇಲಾಖೆ ಅಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗೆ ಸಂಬಂಧಿಸಿದಂತೆ ರೈಲ್ವೇ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಹಾಗೂ ಯೋಜನೆಗೆ ಹೊಂದಿಕೊಂಡಿರುವ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಇಂದು ಶಿವಮೊಗ್ಗದ ಸಂಸದ ಬಿ ವೈ ರಾಘವೇಂದ್ರ ಮಹತ್ವದ ಸಭೆ ನಡೆಸಿದರು

–:ಈ ಕೆಳಕಂಡ ಕಾಮಗಾರಿಗಳ ಕುರಿತು ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಸಲಾಯಿತು:–

1. ಶಿವಮೊಗ್ಗ–ಶಿಕಾರಿಪುರ–ರಾಣೇಬೆನ್ನೂರು ನೂತನ ರೈಲ್ವೆ ಮಾರ್ಗದ ಮೊದಲ ಮತ್ತು ಎರಡನೇ ಹಂತದ ಕಾಮಗಾರಿ ಸಾಗಿರುವ ಕುರಿತು ಮಾಹಿತಿ ಕಲೆಹಾಕಲಾಯಿತು.

2. ಭದ್ರಾವತಿ ಸೇರಿದಂತೆ ಹೊಸದಾಗಿ ಅನುಮೋದನೆ ದೊರಕಿರುವ ರೈಲ್ವೇ ಮೇಲ್ಸೇತುವೆ ಮತ್ತು ರೈಲ್ವೇ ಕೆಳಸೇತುವೆ ಕಾಮಗಾರಿ ಸಾಗಿರುವ ಹಂತದ ಕುರಿತು ಮಾಹಿತಿ ಪಡೆಯಲಾಯಿತು.

3. ಬೀರೂರು–ಶಿವಮೊಗ್ಗ ರೈಲ್ವೆ ಡಂಬಲಿಂಗ್ ಯೋಜನೆ ಶೀಘ್ರವಾಗಿ ಪ್ರಾರಂಭಿಸುವ ಕುರಿತು ಚರ್ಚೆ ನಡೆಸಲಾಯಿತು.

4. ಕೋಟೆ ಗಂಗೂರಿನಲ್ಲಿ ನಡೆಯುತ್ತಿರುವ ಕೋಚಿಂಗ್ ಡಿಪೋ ಕಾಮಗಾರಿ ಸಾಗಿರುವ ಹಂತದ ಕುರಿತು ಮಾಹಿತಿ ಪಡೆದು "ಒಂದೇ ಭಾರತ್" ರೈಲಿಗೆ ಅನುಕೂಲವಾಗುವಂತೆ ಯೋಜನೆ ಸಿದ್ಧಪಡಿಸುವಂತೆ ಸೂಚನೆ ನೀಡಲಾಯಿತು. ಈ ಎಲ್ಲಾ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬೇಕಾಗಿರುವ ಅಗತ್ಯ ಅನುದಾನ ಒದಗಿಸುವ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಹಾಗೂ ಭವಿಷ್ಯದ ಅನೇಕ ಯೋಜನೆಗಳ ಬಗ್ಗೆ ಚರ್ಚೆ ನಡೆಸಿ ಸೂಕ್ತ ಸಮಯದಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡಿಸಲು ರೈಲ್ವೇ ಸಚಿವರ ಮನವೊಲಿಸುತ್ತೇನೆ ಎಂದು ಭರವಸೆ ನೀಡಿ, ಅಧಿಕಾರಿಗಳಿಗೆ ಅಗತ್ಯ ಕ್ರಮಕೈಗೊಳ್ಳಲು ಸೂಚನೆ ನೀಡಲಾಯಿತು.

## 2021ರಲ್ಲಿ ಭಾರತದಲ್ಲಿ ವಾಯುಮಾಲಿನ್ಯದಿಂದ 21 ಲಕ್ಷ ಜನರ ಸಾವು!

ನವದೆಹಲಿ: ವಾಯುಮಾಲಿನ್ಯದಿಂದ 2021ರಲ್ಲಿ ಭಾರತ ಮತ್ತು ಚೀನಾಗಳಲ್ಲಿ ಕ್ರಮವಾಗಿ 2.1 ಮಿಲಿಯನ್ (21 ಲಕ್ಷ) ಮತ್ತು 2.3 ಮಿಲಿಯನ್ (23 ಲಕ್ಷ) ಜನ ಸಾವಿಗೀಡಾಗಿದ್ದಾರೆ ಎಂದು ಬುಧವಾರ ಬಿಡುಗಡೆಯಾದ ವರದಿ ತಿಳಿಸಿದೆ. ವಿಶ್ವಾದ್ಯಂತ 2021ರಲ್ಲಿ ವಾಯುಮಾಲಿನ್ಯದಿಂದ 8.1 ಮಿಲಿಯನ್ ಜನ ಮೃತಪಟ್ಟಿದ್ದಾರೆ ಎಂದು ವರದಿ ಹೇಳಿದೆ.

ಯುನಿಸೆಫ್ ಸಹಭಾಗಿತ್ವದಲ್ಲಿ ಯುಎಸ್ ಮೂಲದ ಸ್ವತಂತ್ರ ಸಂಶೋಧನಾ ಸಂಸ್ಥೆಯಾದ ಹೆಲ್ತ್ ಎಫೆಕ್ಟ್ಸ್ ಇನ್ ಸ್ಟಿಟ್ಯೂಟ್ (ಎಚ್‌ಇಐ) ಪ್ರಕಟಿಸಿದ ವರದಿಯಲ್ಲಿ, ವಾಯುಮಾಲಿನ್ಯವು 2021 ರಲ್ಲಿ ಭಾರತದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ 1,69,400 ಮಕ್ಕಳ ಸಾವಿಗೆ ಕಾರಣವಾಗಿದೆ ಎಂದು ಹೇಳಿದೆ. 1,14,100 ಮಕ್ಕಳ ಸಾವಿನೊಂದಿಗೆ ನೈಜೀರಿಯಾ ನಂತರದ ಸ್ಥಾನದಲ್ಲಿದೆ. ಹಾಗೆಯೇ ಪಾಕಿಸ್ತಾನದಲ್ಲಿ 68,100, ಇಥಿಯೋಪಿಯಾದಲ್ಲಿ 31,100 ಮತ್ತು ಬಾಂಗ್ಲಾದೇಶದಲ್ಲಿ 19,100 ಮಕ್ಕಳು ವಾಯುಮಾಲಿನ್ಯಕ್ಕೆ ಬಲಿಯಾಗಿವೆ. ದಕ್ಷಿಣ ಏಷ್ಯಾದಲ್ಲಿನ ಸಾವುಗಳಿಗೆ ವಾಯುಮಾಲಿನ್ಯವು ಪ್ರಮುಖ ಅಪಾಯಕಾರಿ ಅಂಶವಾಗಿದೆ. ಅಧಿಕ ರಕ್ತದೊತ್ತಡ, ಆಹಾರ ಶೈಲಿ ಮತ್ತು ತಂಬಾಕಿನಿಂದ ಸಂಭವಿಸುವ ಸಾವುಗಳು ನಂತರದ ಸ್ಥಾನದಲ್ಲಿವೆ ಎಂದು ವರದಿ ಹೇಳಿದೆ.

## ಜೂನ್ 24ರವರೆಗೆ ಪ್ರಜ್ವಲ್ ಎಸ್‌ಐಟಿ ಕಸ್ಟಡಿಗೆ

ಮಹಿಳಾ ರಾಜಕಾರಣಿಯೊಬ್ಬರ (ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ) ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಜೂನ್ 24ರವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದೆ.

ನ್ಯಾಯಾಂಗ ಬಂಧನದಲ್ಲಿದ್ದ ಪ್ರಜ್ವಲ್ ರೇವಣ್ಣ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶೇಷ ಮ್ಯಾಜಿಸ್ಟ್ರೇಟ್ ಕೆ ಎನ್ ಶಿವಕುಮಾರ್ ಅವರ ಮುಂದೆ ಹಾಜರುಪಡಿಸಲಾಯಿತು.

ಎಸ್‌ಐಟಿ ವಿಶೇಷ ಸರ್ಕಾರಿ ಅಭಿಯೋಜಕರಾದ ಅಶೋಕ್ ನಾಯಕ್ ಅವರು "ಮೂರನೇ ಅತ್ಯಾಚಾರ ಪ್ರಕರಣವು ಸಂಸದರ ಬಂಗ್ಲೆಯಲ್ಲಿ ನಡೆದಿದೆ. ಅಲ್ಲಿ ಸ್ಥಳ ಮಹಜರ್ ಮಾಡಬೇಕು, ವಿಚಾರಣೆ ನಡೆಸಬೇಕಿದೆ. ಎಸ್‌ಐಟಿಯ ಮುಖ್ಯಸ್ಥರು ಒಬ್ಬರೇ ಇದ್ದರೂ ಇಲ್ಲಿ ಪ್ರತ್ಯೇಕವಾಗಿ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ತನಿಖಾಧಿಕಾರಿಗಳು ಬೇರೆ ಬೇರೆ ಇದ್ದಾರೆ. ಸಂತ್ರಸ್ತೆಯರು ಬೇರೆ ಬೇರೆ ಇದ್ದಾರೆ. ಸಿಆರ್‌ಪಿಸಿ ಸೆಕ್ಷನ್ 53(ಎ) ಅಡಿ ಆರೋಪಿಯ ಪುರುಷತ್ವ ಸೇರಿದಂತೆ ವಿವಿಧ ವೈದ್ಯಕೀಯ ಪರೀಕ್ಷೆ ನಡೆಸಬೇಕಿದೆ.

## ಪ್ರತಿ ಗ್ರಾಮಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ: ಸಹಕಾರ ಸಚಿವ ರಾಜಣ್ಣ

ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮ ಸೇರಿದಂತೆ ಎಲ್ಲಾ ಗ್ರಾಮ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಹಕಾರ ಸಚಿವ ಕೆ. ಎನ್. ರಾಜಣ್ಣ ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ ಚಿನ್ನೇನಹಳ್ಳಿ ಗ್ರಾಮದಲ್ಲಿ ಚರಂಡಿ ಮತ್ತು ರಸ್ತೆಯ ಬದಿಯಲ್ಲಿ ಸ್ವಚ್ಛತೆ ಮಾಡಬೇಕು ಸೊಳ್ಳೆ ಮತ್ತು ನೊಣ ಹಾಗೂ ಕ್ರಿಮಿಕೀಟ ಗಳನ್ನು ನಿಯಂತ್ರಣ ಮಾಡುವುದಕ್ಕೆ ಬ್ಲೀಚಿಂಗ್ ಪೌಡರ್, ಫಾಗಿಂಗ್ ಮಾಡಿಸುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.






ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಗುರುವಾರ 20 ಜೂನ್ 2024
THURSDAY 20 June 2024

# ಬಿಜೆಪಿ ಮಂಡಲದ ವತಿಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ಚಳವಳಿ




ತಿ.ನರಸೀಪುರ.ರಾಜ್ಯ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿ ಖಂಡಿಸಿ ಇಂದು (20:06:24) ಬೆಳಿಗ್ಗೆ 11ಗಂಟೆಗೆ ತಿ. ನರಸೀಪುರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಮಂಡಲದ ವತಿಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಹಿರಿಯ ಮುಖಂಡ ಡಾ. ರೇವಣ್ಣ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಡಾ.ರೇವಣ್ಣ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಸಿ ಜನ ಸಾಮಾನ್ಯರು ರೈತರಿಗೆ ಹೊರೆ ಹೊರೆಸಿದೆ ಇದನ್ನು ಖಂಡಿಸಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ ರಾಜ್ಯ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಲಾಗುವುದು ಎಂದರು.

ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ನೆಪದಲ್ಲಿ ವಿವಿಧ ಶುಲ್ಕ ಹೆಚ್ಚಿಸುವ ಮೂಲಕ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದೆ ಬಸ್ ಪ್ರಯಾಣ ದರ ಏರಿಸಿ ಮಹಿಳೆಯರಿಗೆ ಉಚಿತ ಪ್ರಯಾಣ, ಮತ್ತೊಂದೆಡೆ ವಿದ್ಯುತ್ ದರ ಏರಿಸಿ, ಉಚಿತ ವಿದ್ಯುತ್ ಎನ್ನುತ್ತಿದೆ. ಒಂದು ಕೈಯಿಂದ ಕಿತ್ತುಕೊಂಡು ಮತ್ತೊಂದು ಕೈಗೆ ಕೊಡುವ ಕೆಲಸ ಮಾಡಿ ಮುಗ್ಧ ಜನರ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ ಇದನ್ನು ಬಿಜೆಪಿ ರಾಜ್ಯದ್ಯಾಂತ ಖಂಡಿಸಿ ಹೋರಾಟ ಮಾಡುತ್ತಿದೆ ಎಂದರು.

ಮಂಡಲ ಅಧ್ಯಕ್ಷ ಹಿರಿಯೂರು ಶಿವಕುಮಾರ್ (ಸತ್ಯರಾಜ್) ಮಾತನಾಡಿ ರಾಜ್ಯ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಯನ್ನು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಪಕ್ಷ ರಸ್ತೆ ತಡೆ ಚಳುವಳಿ ಮಾಡುತ್ತಿದ್ದು ಅದರಂತೆ ತಿ.ನರಸೀಪುರ ಪಟ್ಟಣದಲ್ಲೂ ರಸ್ತೆ ತಡೆ ಚಳುವಳಿ ಮಾಡುಲಾಗುತ್ತಿದ್ದು ಈ ಒಂದು ರಸ್ತೆ ತಡೆ ಚಳುವಳಿಗೆ ಕ್ಷೇತ್ರದ ಎಲ್ಲಾ ಚುನಾಯಿತ ಪ್ರತಿನಿಧಿಗಳು ಪಕ್ಷದ ಪಧಾದಿಕಾರಿಗಳು ಬೂತ್ ಅಧ್ಯಕ್ಷರು ಹಾಗೂ ಸದಸ್ಯರು ಪ್ರಮುಖರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಶಿವಕುಮಾರ್ ,ಡಾ. ಮಲ್ಲಿಕಾರ್ಜುನಸ್ವಾಮಿ, ಪುರಸಭಾ ಸದಸ್ಯ ಎಸ್ ಕೆ ಕಿರಣ್, ಪೂಜಿತ್ ಕುಮಾರ್, ಯುವ ಮೋರ್ಚಾ ಅಧ್ಯಕ್ಷ ಶಿವಶಂಕರ್, ತೊಂಟೇಶ್, ಶಕ್ತಿಕೇಂದ್ರ ಅಧ್ಯಕ್ಷ ಮರಿಸ್ವಾಮಿ, ಕೆಬ್ಬೆ ಹುಂಡಿ ಸೋಮಶೇಖರ್, ರಾಮಚಂದ್ರ,ಅನಿಲ್ ಕುಮಾರ್, ಕರುಹಟ್ಟಿ ರಾಜಶೇಖರ್, ಲಕ್ಷ್ಮಣ್, ನಾಗರಾಜು ಸೇರಿ ದಂತೆ ಮತ್ತಿತರರು ಹಾಜರಿದ್ದರು.

# ತಾಲೂಕು ಆಸ್ಪತ್ರೆ ರೋಗಿಗಳಿಗೆ ಹುಟ್ಟುಹಬ್ಬದ ಹಿನ್ನೆಲೆ ಹಣ್ಣು ವಿತರಣೆ



ಪುರಸಭೆಯ ಮಾಜಿ ಅಧ್ಯಕ್ಷರು ಮತ್ತು ಕಾಡಿರ್ಯಲ್ ಸಮೂಹ ಶಾಲೆಗಳ ಕಾರ್ಯದರ್ಶಿ ಎಂ. ಕೆ ನಂಜುಂಡಯ್ಯನವರ ಹುಟ್ಟು ಹಬ್ಬದ ಪ್ರಯುಕ್ತ ಭಾನುವಾರ ಮಧುಗಿರಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹೊರ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ಪುರಸಭೆಯ ಮಾಜಿ ಸದಸ್ಯ ಹನುಮಂತರಾಜು ನೇತೃತ್ವದಲ್ಲಿ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅಭಿಮಾನಿಗಳಾದ ರಾಜೇಶ್, ಬಸವರಾಜು, ಚಿನ್ನಸ್ವಾಮಿ, ರಾಜಶೇಖರ್, ಬ್ರಹ್ಮಕುಮಾರ್, ಈರಣ್ಣ, ಚಾಂದು ಮತ್ತಿತರರು ಇದ್ದರು.

# ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಗ್ರಾಮ ಸಭೆ ನಡೆಯಿತು

ಯರಿಯೂರು ಗ್ರಾಮದ ಶ್ರೀ ಮಂಟೇಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಗ್ರಾಮ ಸಭೆ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನೆ ಹಾಗೂ ಗ್ರಾಮ ಸಭೆ ನಡೆಯಿತು




ಗ್ರಾಮ ಸಭೆಯನ್ನು ಉದ್ದೇಶಿಸಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ದೊಡ್ಡಮ್ಮ ನಂಜುಂಡಸ್ವಾಮಿರವರು ಮಾತನಾಡಿ ನಮ್ಮ ಗ್ರಾಮ ಪಂಚಾಯಿತಿಯಲ್ಲಿ 2023/24ನೇ ಸಾಲಿನಲ್ಲಿ ನಡೆದಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮತ್ತು 15ನೇ ಹಣಕಾಸು ಯೋಜನೆಯ ಸಾಮಾಜಿಕ ಲೆಕ್ಕ ಪರಿಶೋಧನೆ ಸಭೆ ನಡೆಸಿ ಓದಿ ರೇಕಾರ್ಡ್ ಮಾಡಲಾಯಿತು ಮುಂದಿನ ಸಾಲಿನಲ್ಲಿ ನಡೆಯಬೇಕಾದ ಕಾಮಗಾರಿಗಳ ಬಗ್ಗೆ ಸಾರ್ವಜನಿಕರು ಹಾಗೂ ಸದಸ್ಯರುಗಳ ಜೊತೆ ಚರ್ಚಿಸಿ ನಿರ್ಧಾರ ಮಾಡಲಾಗುವುದು ಎಂದು ತಿಳಿಸಿದರು

2024/25 ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕ್ರಿಯಾ ಯೋಜನೆ ಪಟ್ಟಿ ತಯಾರಿಸಿ ಮುಂದಿನ ಕಾಮಗಾರಿಗಳನ್ನು ನೆಡೆಸಲಾಗುವುದು ಎಂದು ತಿಳಿಸಿದರು

ನಂತರ ನೋಡಲ್ ಅಧಿಕಾರಿಗಳಾದ ಕೆ.ಕಾಂತರಾಜುರವರು ಮಾತನಾಡಿ ಯರಿಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಿಗೂ ಶುದ್ದ ಕುಡಿಯುವ ನೀರು ವಿದ್ಯುತ್ ಹಾಗೂ ಚರಂಡಿಗಳ ನಿರ್ವಹಣೆ ಶಾಲೆಗಳ ಸ್ವಚ್ಚತೆಯನ್ನು ಕಾಪಾಡಿಕೊಳ್ಳಲು ಎಲ್ಲಾ ಸಾರ್ವಜನಿಕರಿಗೆ ಹಾಗೂ ಗ್ರಾಮವನ್ನು ಅಭಿವೃದ್ಧಿ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು

ಈ ಸಭೆಯಲ್ಲಿ ಗ್ರಾಮ ಪಂಚಾಯತಿ, ಉಪಾಧ್ಯಕ್ಷರಾದ ಮಹೇಶ್, ಸದಸ್ಯರಾದ ನಾರಾಯಣಸ್ವಾಮಿ, ಕಪ್ಪಣ್ಣ , ರಮೇಶ್, ರಾಜೇಶ್ , ಚಿನ್ನಸ್ವಾಮಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಮೇಶ್ ಹಾಗೂ ಲೆಕ್ಕ ತಪಾಸಣೆ ತಂಡದ ಸದಸ್ಯರಾದ ರಾಜು ಸಹನಾ ಸುಧಾ ಮತ್ತು ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯುಲ್ಲಿ ಭಾಗವಹಿಸಿದರು.

ವರದಿ: ಆರ್.ಉಮೇಶ್ ಮಲಾರಪಾಳ್ಯ

ಪುಟ 1ರಿಂದ ಮಾಡಲಿದ್ದಾರೆ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರನ್ನು ಬೆಂಗಳೂರಿನಲ್ಲಿ ಮುತ್ತಯ್ಯ ಭೇಟಿಯಾದರು. ಮುತ್ತಯ್ಯ ಅವರೊಂದಿಗೆ ಸಚಿವರು ಈ ಸಂಬಂಧ ಮಾತುಕತೆ ನಡೆಸಿದರು. ಬಳಿಕ ಮಾತನಾಡಿದ ಸಚಿವರು, ಬದನಗುಪ್ಪೆಯಲ್ಲಿ ಮುರಳೀಧರನ್ ಅವರು 'ಮುತ್ತಯ್ಯ ಬ್ರಿವರೇಜಸ್ ಮತ್ತು ಕನ್ಫೆಕ್ಷನರೀಸ್' ಎನ್ನುವ ಬ್ರ್ಯಾಂಡ್ ನಲ್ಲಿ ತಮ್ಮ ಉದ್ದಿಮೆ ಆರಂಭಿಸುತ್ತಿದ್ದು, ಶುರುವಿನಲ್ಲಿ 230 ಕೋಟಿ ರೂಪಾಯಿ ಹೂಡಿಕೆಗೆ ಯೋಜನೆ ರೂಪಿಸಲಾಗಿತ್ತು. ನಂತರ ಅದು ಈಗ ಸಾವಿರ ಕೋಟಿ ಮುಟ್ಟುತ್ತಿದೆ. ಮುಂದಿನ ದಿನಗಳಲ್ಲಿ 1,400 ಕೋಟಿ ಆಗಲಿದೆ ಎಂದು ಮುತ್ತಯ್ಯ ತಮಗೆ ತಿಳಿಸಿದ್ದಾರೆ ಎಂದು ಅವರು ವಿವರಿಸಿದರು. ಇದಕ್ಕಾಗಿ ಅವರಿಗೆ ಈಗಾಗಲೇ 46 ಎಕರೆ ಭೂಮಿ ಕೊಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲ ಸಣ್ಣಪುಟ್ಟ ತೊಡಕುಗಳಿದ್ದವು. ಅವುಗಳನ್ನು ಕೂಡಲೇ ಸರಿಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬದನಗುಪ್ಪೆಯಲ್ಲಿ ಮುಂಬರುವ ಜನವರಿಯಲ್ಲಿ ಉತ್ಪಾದನಾ ಚಟುವಟಿಕೆ ಆರಂಭವಾಗಲಿದೆ ಎಂದು ಅವರು ನುಡಿದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತರಾದ ಗುಂಜನ್ ಕೃಷ್ಣ, ಕೆಐಎಡಿ ಸಿಇಒ ಡಾ.ಮಹೇಶ, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಸಚಿವರೊಂದಿಗೆ ಇದ್ದರು.

ವರದಿ: ಮಹದೇವಪ್ರಸಾದ್ ಹಂಗಳ

# ಕರ್ನಾಟಕ ಜನಸೇನಾ ಪದಾಧಿಕಾರಿಗಳು ಆಯ್ಕೆ



ಕರ್ನಾಟಕ ಜನಸೇನಾ ಸಂಘಟನೆಯ ಜಿಲ್ಲಾಧ್ಯಕ್ಷ ವಿನೋದ್ ರೆಡ್ಡಿ ತಳಕ ಅವರ ಆದೇಶದ ಮೇರೆಗೆ ಯಾದಗಿರಿ ತಾಲೂಕು ಪದಾಧಿಕಾರಿಗಳು ಆಯ್ಕೆ ಮಾಡಲಾಯಿತು. ಕೈಲಾಸ ವಿದ್ಯಾರ್ಥಿ ಘಟಕ ತಾಲೂಕು ಅಧ್ಯಕ್ಷ, ಗಿರೀಶ್ ವಡಿಗೇರ ತಾಲೂಕು ಉಪಾಧ್ಯಕ್ಷ, ಮನೋಜ್ ಕುಮಾರ್ ಹೆಡಗಿಮದ್ರಿ ಯಾದಗಿರಿ ತಾಲೂಕು ಪ್ರಧಾನ ಕಾರ್ಯದರ್ಶಿ, ಪ್ರವಿಣ ಕುಮಾರ್ ತಳಕ್ ತಾಲೂಕು ಸಂಘಟನೆ ಕಾರ್ಯದರ್ಶಿ ಯಾಗಿ, ಆಯ್ಕೆ ಮಾಡಿ ಆದೇಶವನ್ನು ಹೊರಡಿಸಲಾಯಿತು .

ವರದಿ: ಮಲ್ಲಿಕಾರ್ಜುನ ಕುಂಬಾರಳ್ಳಿ ಯಾದಗಿರಿ ಜಿಲ್ಲೆ

# ಕಲುಷಿತ ನೀರು ಪ್ರಭಾವಿತ ಗ್ರಾಮಗಳಿಗೆ ಜಿಪಂ ಸಿಇಒ ಭೇಟಿ

## ಮುಂಜಾಗ್ರತಾ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ

ಮುಂಜಾನೆ ವಾರ್ತೆ ಸುದ್ದಿ ತಾಳಿಕೋಟಿ: ತಾಲೂಕಿನ ಕೆಲವು ಗ್ರಾಮಗಳಲ್ಲಿ ಇತ್ತೀಚಿಗೆ ಕಲುಷಿತ ನೀರು ಸೇವಿಸಿ ಗ್ರಾಮಸ್ಥರು ವಾಂತಿಭೇದಿಯಿಂದ ಅಸ್ತವ್ಯಸ್ಥಗೊಂಡ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ ಸಿಇಓ ರಿಷಿ ಆನಂದ ಅಧಿಕಾರಿಗಳ ತಂಡದೊಂದಿಗೆ ಬುಧವಾರ ಭೇಟಿ ನೀಡಿದರು. ಮೊದಲಿಗೆ ಕಲುಷಿತ ನೀರು ಸೇವಿಸಿ ಅತಿ ಹೆಚ್ಚು ಜನರು ಭಾದಿತರಾದ ಸಮಸ್ಯೆಗಳನ್ನು ಆಲಿಸಿದರು. ಅವರಿಗೆ ಗ್ರಾಮದ ಸ್ವಚ್ಛತೆ ಕುರಿತು ಗ್ರಾಮ ಪಂಚಾಯತ ಯೊಂದಿಗೆ ಸಹಕರಿಸಲು ತಿಳಿಸಿದರು. ಸ್ಥಳದಲ್ಲಿ ಉಪಸ್ಥಿತರಿದ್ದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಬಾರಿ ಈ ಭಾಗದಲ್ಲಿ ಮುಂಗಾರು ಮಳೆ ಅತಿ ಹೆಚ್ಚಾಗಿ ಸುರಿದ ಕಾರಣದಿಂದಾಗಿ ಮಳೆ ನೀರಿನಲ್ಲಿ ಮಿಶ್ರಿತವಾದ ಕೊಳಚೆ ನೀರು ಕುಡಿಯುವ ನೀರಿಗೆ ಸೇರಿ ಸಮಸ್ಯೆ ಆಗಿರುವ



ನಾವದಗಿ ಗ್ರಾಮಕ್ಕೆ ಭೇಟಿ ನೀಡಿದ ಅವರು ಅಲ್ಲಿರುವ ಕುಡಿಯುವ ನೀರಿನ ಮೂಲಗಳಾದ ತೆರೆದ ಬಾವಿ ಮತ್ತು ಬೋರ್ವೆಲ್ ಗಳನ್ನು ವೀಕ್ಷಿಸಿ ಸ್ಥಳದಲ್ಲಿದ್ದ ಕೊಡಗಾನೂರ ಪಿಡಿಒ ಅನೀಲ ಕುಮಾರ ಕಿರಣಗಿ ಅವರಿಂದ ಮಾಹಿತಿ ಪಡೆದುಕೊಂಡರು.ಈ ಎರಡು ಮೂಲಗಳ ಸುತ್ತಲೂ ಸ್ವಚ್ಛತೆಯನ್ನು ಕಾಪಾಡಿಕೊಂಡು ಯಾವ ಕಾರಣಕ್ಕೂ ಕೊಳಚೆ ನೀರು ಇವುಗಳಿಗೆ ಸೇರಿದಂತೆ ನೋಡಿಕೊಳ್ಳಲು ಸೂಚನೆ ನೀಡಿದರು. ನಂತರ ಅವರು ಮಿಣಜಗಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿಯ ಕುಡಿಯುವ ನೀರಿನ ಬೋರ್ವೆಲ್ ಮತ್ತು ಓವರಹೆಡ್ ಟ್ಯಾಂಕ್ ವೀಕ್ಷಿಸಿದರು ಸ್ಥಳದಲ್ಲಿದ್ದ ಪಿಡಿಒ ಸಾಗರ ಅವರಿಗೆ ಇದರ ಸ್ವಚ್ಛತೆ ಕುರಿತು ಸದಾ ನಿಗಾವಹಿಸುವಂತೆ ಸೂಚಿಸಿ ತೆರೆದ ಬಾವಿ ಮತ್ತು ಬೋರ್ವೆಲ್ ನೀರನ್ನು ಸಂದರ್ಭಕ್ಕೆ ಅನುಸಾರವಾಗಿ ಸ್ಯಾಂಪಲ್ ಟೆಸ್ಟ್ ಮಾಡಿಸಲು ತಿಳಿಸಿದರು. ಕುಡಿಯಲು ಯೋಗ್ಯ ಇಲ್ಲದ ಬಾವಿ ಮತ್ತು ಬೋರ್ವೆಲ್ ಗಳ ಹತ್ತಿರ ಕುಡಿಯುವುದಕ್ಕೆ ಯೋಗ್ಯವಲ್ಲದ ನೀರು ಎಂದು ಸೂಚನಾ ಫಲಕ ಬರೆದು ಹಾಕಲು ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ಎರಡೂ ಗ್ರಾಮಗಳ ಗ್ರಾಮಸ್ಥರ ಸಾಧ್ಯತೆ ಇದೆ ಆದರೆ ಇದು ಅತಿ ಗಂಭೀರವಾದ ಸಮಸ್ಯೆ ಆಗಿಲ್ಲ ಈ ಕಾರಣಕ್ಕಾಗಿ ನಾವು ಎಲ್ಲಾ ಪಿಡಿಓಗಳಿಗೆ ಕಾಲಕಾಲಕ್ಕೆ ಕುಡಿಯುವ ನೀರಿನ ಸ್ಯಾಂಪಲ್ ಟೆಸ್ಟ್ ಮಾಡಿಸಿ ಎಂದು ಆದೇಶಿಸಿದ್ದೇವೆ ಇದನ್ನು ಅವರು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಾನು ಆದೇಶ ಕೊಟ್ಟಿದ್ದೇನೆ ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುವುದು ಎಂದರು.ಈ ಸಮಯದಲ್ಲಿ ತಾ.ಪಂ.ಇ.ಒ. ಬಿ.ಆರ್.ಬಿರಾದಾರ.ಆರ್ ಡಬ್ಲ್ಯೂ ಎಸ್ ಡಬ್ಲ್ಯೂ ಆರ್.ಎಸ್.ಹಿರೇಗೌಡರ.ಟಿಎಚ್ಓ ಸತೀಶ ತಿವಾರಿ. ಜಿಲ್ಲಾ ಆರೋಗ್ಯ ಇಲಾಖೆಯ ಡಾ. ಕವಿತಾ ದೊಡ್ಡಮನಿ.ಜಿಪಂ ಸಹಾಯಕ ಸಂಯೋಜನಾಧಿಕಾರಿ ಅರುಣ ಕುಮಾರ ದಳವಾಯಿ. ತಾಳಿಕೋಟಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶ್ರೀಶೈಲ ಹುಕ್ಕೇರಿ.ಪಿಎಚ್ ಸಿ ವೈತ್ಯಾಧಿಕಾರಿ ಡಾ. ಸುನೀಲ ಹಿರೇಗೌಡರ.ಪಿಡಿಒಗಳಾದ ಅನೀಲಕುಮಾರ ಕಿರಣಗಿ.ಬಿ.ಎಂ.ಸಾಗರ. ಹಾಗೂ ವಿವಿಧ ಇಲಾಖೆಯ ಸಿಬ್ಬಂದಿಗಳು ಇದ್ದರು.

ವರದಿ: ಸುನೀಲ್ ಎಲ್ ತಳವಾರ
ಮುಂಜಾನೆ ವಾರ್ತೆ ತಾಳಿಕೋಟಿ

# ಕಳಪೆ ಗುಣಮಟ್ಟದ ಬಿತ್ತನೆ ಬೀಜ ವಿತರಣೆ ವಿರುದ್ಧ ರೈತ ಸಂಘ ಪ್ರತಿಭಟನೆ..

ಈಗಾಗಲೇ ಸರಿಯಾದ ಸಮಯಕ್ಕೆ ಮಳೆ ಬಾರದೆ ಬಿತ್ತನೆಗೆ ತಡವಾಗಿದೆ ಅದರಲ್ಲಿಯೂ ರೈತರು ಬಿತ್ತನೆ ಮಾಡುವ ಬೀಜದಲ್ಲಿ ಕಳಪೆ ಗುಣಮಟ್ಟದ ಬಿತ್ತನೆ ಬೀಜವನ್ನು ಕೊಟ್ಟರೆ ಹೇಗೆ....? ಇದನ್ನು ಆದಷ್ಟು ಬೇಗ ಸರಿಪಡಿಸಿ ರೈತರಿಗೆ ಗುಣಮಟ್ಟದ ಬಿತ್ತನೆ ಬೀಜವನ್ನು ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ರಂಗಹನುಮಯ್ಯ ತಾಲೂಕು ಅಧ್ಯಕ ರಾಜ್ಯ ರೈತ ಸಂಘ.

ಕರ್ನಾಟಕ ರೈತ ಸಂಘ ಈಗಾಗಲೇ ಕೃಷಿ ಇಲಾಖೆಗೆ ಬಿತ್ತಿನೆ ಬೀಜ ಹಾಗೂ ರಸಗೊಬ್ಬರ ವಿಚಾರದಲ್ಲಿ ಒಂದು ಎಚ್ಚರಿಕೆ ನೀಡಿತ್ತು ಆದರೂ ಇತ್ತೀಚೆಗೆ ಕೃಷಿ ಇಲಾಖೆಯಿಂದ ನೀಡಲಾದ ಶೇಂಗಾ ಕಳಪೆ ಗುಣಮಟ್ಟದಿಂದ ಕೂಡಿದ್ದು, ಕೃಷಿ ಇಲಾಖೆಯಲ್ಲಿ ಸಬ್ಸಿಡಿ ದರದಲ್ಲಿ ಏನು ಪಡೆಯಲಾಗುತ್ತಿದೆ ಅದು ಸದ್ಯದ ಮಾರುಕಟ್ಟೆಯ ದರಕ್ಕೆ ಸರಿಸಮನಾಗಿದ್ದು, ಕೃಷಿ ಇಲಾಖೆಯಿಂದ ಸರ್ಕಾರ ನೀಡುವಂತ ಬಿತ್ತನೆ ಬೀಜ ಕಳಪೆಯಿಂದ ಕೂಡಿದೆ ಬಹಳಷ್ಟು ರೈತರು ರೈತ ಸಂಪರ್ಕ ಕೇಂದ್ರಕ್ಕೆ ಶೇಂಗಾ ವಾಪಸ್ ನೀಡಿದ್ದು, ತತಕ್ಷಣ ಸಂಬಂಧಪಟ್ಟವರು ಇತ್ತ ಗಮನಹರಿಸಿ ರೈತರ ಸಂಕಷ್ಟಕ್ಕೆ ದಾವಿಸ್ಬೇಕು.

ಶಬೀರ್... ಹೋಬಳಿ ಅಧ್ಯಕ್ಷ ಕೋಳಾಲ.

ಕೊರಟಗೆರೆ:-ಕೃಷಿ ಇಲಾಖೆ ರೈತರಿಗೆ ಕಳಪೆ ಗುಣ ಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆ ಮಾಡಲಾಗುತ್ತಿದ್ದು, ರೈತರಿಗೆ ನೀಡುತ್ತಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದುಪ್ಪಟ್ಟು ಬೆಲೆಗೆ ಮಾರಾಟ ತಹಶೀಲ್ದಾವರಿಗೆ ಮನವಿ ಸಲ್ಲಿಸಿದರು.

ಕೊರಟಗೆರೆ ಕೃಷಿ ಇಲಾಖೆಯಲ್ಲಿ ಆಗುತ್ತಿರುವಂತ ಅನ್ಯಾಯದ ವಿರುದ್ಧ ತಾಲೂಕ ರೈತ ಸಂಘ ಕೃಷಿ ಇಲಾಖೆಯಿಂದ ಎಲ್ಲಾ ರೀತಿಯ ಮಾಹಿತಿ ಕಲೆಹಾಕಿ ನಂತರ ತಾಸಿಲ್ದಾರ್ ಕಚೇರಿ



ಮಾಡಲಾಗುತ್ತಿದೆ. ಖಾಸಗಿ ಮಾರುಕಟ್ಟೆಯಲ್ಲಿ ಸಿಗುವ ಅದೇ ಬೆಲೆಗೆ ಕೃಷಿ ಇಲಾಖೆಯಲ್ಲಿ ಮಾರಾಟ ಮಾಡುತ್ತಿದೆ ಎಂದು ಆರೂಪಿಸಿ ರೈತ ಸಂಘ ತಾಲೂಕು ಕಚೇರಿ ಎದುರು ಪ್ರತಿಭಟನೆ ಮಾಡಿ ಕೃಷಿ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.

ಸರ್ಕಾರದಿಂದ ರೈತರಿಗಾಗಿ ಕಡಿಮೆ ಬೆಲೆಯಲ್ಲಿ ಗುಣ ಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ನೀಡಬೇಕು. ಆದರೆ ಕೊರಟಗೆರೆಯ ಕೃಷಿ ಇಲಾಖೆಯಲ್ಲಿ ಈ ರೀತಿ ಯಾಕೆ ಕಳಪೆ ಗುಣಮಟ್ಟದ ರಸಗೊಬ್ಬರ ಹಾಗೂ ಬಿತ್ತನೆ ಬೀಜ ಬಂದಿದೆ ಎಂದು ತಿಳಿಯುತ್ತಿಲ್ಲ. ಕೂಡಲೇ ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಸರಿಪಡಿಸಬೇಕೆಂದು ಕೊರಟಗೆರೆ ತಾಲೂಕು ಕಚೇರಿ ಮುಂದೆ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟಿಸಿ ಮುಂದೆ ಹತ್ತಾರು ರೈತ ಸಂಘಟನೆಯ ಮುಖಂಡ ಹಾಗೂ ಕಾರ್ಯಕರ್ತರು ತಹಸಿಲ್ದಾರ್ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ರವಾನಿಸುವಂತೆ ಕೃಷಿ ಇಲಾಖೆ ತಾಲೂಕಿನ ರೈತರಿಗೆ ಕಳಪೆ ಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಸೇರಿದಂತೆ ಮಾರುಕಟ್ಟೆಯ ಬೆಲೆಗೆ ಕೃಷಿ ಇಲಾಖೆಯಲ್ಲಿ ಬಿತ್ತನೆ ಬೀಜ ವಿತರಿಸುತ್ತಿರುವ ಬಗ್ಗೆ ರಾಜ್ಯ ಮುಖ್ಯಮಂತ್ರಿಗಳಿಗೆ ಶಿಫಾರಸು ಮಾಡುವಂತೆ ತಹಶೀಲ್ದಾರ್ ರವರಿಗೆ ರೈತರ ಸಂಘ ಮನವಿ ಪತ್ರ ಸಲ್ಲಿಸಿದ್ದರು .

ಇದೇ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ತಾಲೂಕು ಕಾರ್ಯದರ್ಶಿ ಶಬೀರ್ ಪಾಷಾ, ಪದಾಧಿಕಾರಿಗಳಾದ ಮೂಡ್ಲಪ್ಪ, ಮಾರುತಿ, ಮುದ್ದಬಸಪ್ಪ, ರಾಮಕೃಷ್ಣಯ್ಯ, ಶ್ರೀನಾಥ್ ಸೇರಿದಂತೆ ಇನ್ನಿತರ ರೈತರು ಹಾಜರಿದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಗುರುವಾರ 20 ಜೂನ್ 2024
THURSDAY 20 June 2024

# ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಕೋಟ್ಯಾಂತರ ರೂ. ಅನುದಾನ

ಕೊರಟಗೆರೆ :– ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಕೋಟ್ಯಾಂತರ ರೂ ಅನುದಾನ ಬಿಡುಗಡೆಗೊಳಿಸುತಿದ್ದು, ಇದನ್ನೇ ಬಂಡವಾಳ ಮಾಡಿಕೊಂಡಿರುವ ಕೊರಟಗೆರೆ ತಾಲೂಕಿನ ಗ್ರಾಮ ಪಂಚಾಯತಿ ಯೊಂದರಲ್ಲಿ ಆಲ್ಲಿನ ಅಧಿಕಾರಿ ವರ್ಗ ಗ್ರಾಮ ಪಂಚಾಯಿತಿ ಸದಸ್ಯರ ಗಮನಕ್ಕೆ ಬಾರದೆ 1ಕೋಟಿ 34 ಲಕ್ಷ ಅನುದಾನವನ್ನ ದುರ್ಬಳಕೆ ಮಾಡಿಕೊಂಡ ಪ್ರಕರಣ ಪಿಡಿಒ ಅಮಾನತ್ತಿನ ನಂತರ ಅಧ್ಯಕ್ಷರ ಸದಸ್ಯತ್ವ ರದ್ದುಗೊಳಿಸುವಂತೆ ಮಾಡಲಾದ ಮನವಿ ಆಯುಕ್ತಾಲಯ ತಲುಪಿದ್ದು, ವಾದ ಪ್ರತಿ ವಾದಗಳ ಹಂತದಲ್ಲಿರುವ ಪ್ರಕರಣ ಕೆಲವೇ ದಿನಗಳಲ್ಲಿ ತೀರ್ಪು ಹೊರಬಿಳಲಿದ್ದು, ಈ ತೀರ್ಪು ಇತರ ಗ್ರಾಮ ಪಂಚಾಯತಿಗಳಿಗೆ ಎಚ್ಚರಿಕೆ ಗಂಟೆಯಾಗಲಿದೆ ಎನ್ನಲಾಗುತ್ತಿದೆ.

ಕೊರಟಗೆರೆ ತಾಲೂಕಿನ ಸಿಎನ್ ದುರ್ಗಾ ಹೋಬಳಿ ಕುರುಂಕೋಟೆ ಗ್ರಾಮ ಪಂಚಾಯತಿಯಲ್ಲಿ 2021.22ನೇ ಸಾಲಿನಲ್ಲಿ 12 ಲಕ್ಷ ಅನುದಾನ ದುರುಪಯೋಗವಾಗಿದೆ ಎಂದು ಕೆಲವು ಸದಸ್ಯರು ಸಲ್ಲಿಸಿದ ದೂರಿನ ಅನ್ವಯ ಜಿಲ್ಲಾ ಪಂಚಾಯಿತಿಯಿಂದ ನಡೆಸಲಾದ ತನಿಖೆಯಲ್ಲಿ 1 ಕೋಟಿ 34 ಲಕ್ಷ ಅನುದಾನಕ್ಕೆ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಬಿಲ್ ಅಥವಾ ವೋಚರ್ ಇಲ್ಲದೆ ಸಮರ್ಪಕ ಮಾಹಿತಿ ದೊರೆಯದ ಕಾರಣ ಗ್ರಾಮ ಪಂಚಾಯಿತಿಯಲ್ಲಿ ಅವ್ಯವಹಾರ ವಾಗಿರುವುದರ ಬಗ್ಗೆ ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಅಂದಿನ ಪಿಡಿಓ ಸುನಿಲ್ ಅಮಾನತುಗೊಂಡು ನಂತರ ಇತ್ತೀಚೆಗೆ ಸಹಭಾಗಿತ್ವದಲ್ಲಿರುವ ಅಧ್ಯಕ್ಷರನ್ನ ಅಮಾನತುಗೊಳಿಸುವಂತೆ ನೀಡಲಾದ ಮನವಿ ಬೆಂಗಳೂರಿನ ಆಯುಕ್ತ ಲಯದಲ್ಲಿ ವಾದ ಪ್ರತಿವಾದ ನಡೆಯುತ್ತಿದ್ದು ಅತಿ ಶೀಘ್ರವಾಗಿ ತೀರ್ಪು ಬರುವ ಸಾಧ್ಯತೆಯಿದ್ದು ಈ ತೀರ್ಪು ಇತರ ಗ್ರಾಮ ಪಂಚಾಯಿತಿಗಳ ಪಿಡಿಒ ಹಾಗೂ ಅಧ್ಯಕ್ಷರುಗಳಿಗೆ ನಡುಕ ಹುಟ್ಟಿಸುವಂತಿದೆ.

ಮಹಾತ್ಮ ಗಾಂಧಿ ಕಂಡಂತ ಕನಸು ಗ್ರಾಮಸ್ವರಾಜ್ ಪರಿಕಲ್ಪನೆ ಗ್ರಾಮಗಳ ಅಭಿವೃದ್ಧಿಯಾದರೆ ಮಾತ್ರ ರಾಜ್ಯ ಹಾಗೂ ದೇಶ ಅಭಿವೃದ್ಧಿ ಕಾಣಲು ಸಾಧ್ಯ ಎಂಬ ಆಶಯದಲ್ಲಿ ಗಾಂಧಿ ಕಂಡ ರಾಮ ರಾಜ್ಯದ ಕನಸು ರಾಜಕೀಯ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನ ಗ್ರಾಮ ಮಟ್ಟದಲ್ಲಿ ಉತ್ತೇಜನಗೊಳಿಸಿ ಗ್ರಾಮ ಪಂಚಾಯತಿ ಮೂಲಕ ಅನುಷ್ಠಾನಗೊಳಿಸುವ ಅವರ ಕನಸಿಗೆ ಪ್ರಸಕ್ತ ಗ್ರಾಮ ಪಂಚಾಯಿತಿಗಳ ಪಿಡಿಒಗಳು ಎಳ್ಳು ನೀರು ಬಿಡುತ್ತಿದ್ದು ,

ಕೆಲವೊಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಧ್ಯಕ್ಷರುಗಳಿಗೆ ಹಣದ ಮೂಲ ತಿಳಿಸಿ ಹಣದ ಆಮೀಷದ ಮೂಲಕ ಇಡೀ ವ್ಯವಸ್ಥೆಯನ್ನ ಅಡ್ಡ ದಾರಿ ಹಿಡಿಸುತ್ತಿದ್ದು, ಗ್ರಾಮ ಪಂಚಾಯಿತಿ ಅನುದಾನದ ಬಳಕೆಯನ್ನ ಕಾನೂನಾತ್ಮಕವಾಗಿ ಬಳಸದೆ ಗ್ರಾಮ ಪಂಚಾಯಿತಿಗೆ ಬರುವ ಅನುದಾನವನ್ನ ಅಡ್ಡದಾರಿ ಮೂಲಕ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಗ್ರಾಮ ಸ್ವರಾಜ್ ಕಗ್ಗುಲೆ ಯಾದಂತಾಗಿದೆ.

ಕುರಂಕೋಟೆ ಗ್ರಾಮ ಪಂಚಾಯತಿಯಲ್ಲಿ ಅಲ್ಲಿನ ಚುನಾಯಿತ ಸದಸ್ಯರುಗಳಾದ ಮಂಜುನಾಥ್ ಬಿನ್ ಚಂದ್ರಯ್ಯ, ಶಿವಕುಮಾರ್ ಬಿನ್ ರಮೇಶ್, ನಟೇಶ್ ಬಿನ್ ಶಿವಣ್ಣ ಹಾಗೂ ಮಾದೇವಮ್ಮ ಗಂಡ ರಂಗರಾಜು ಎಂಬುವರು 2020– 21 ಹಾಗೂ 2021– 22ನೇ ಸಾಲಿನಲ್ಲಿ 12 ಲಕ್ಷ ಅನುದಾನ 15ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆಗೆ ಅನುಗುಣವಾಗಿ ಕಾಮಗಾರಿ ಬಳಕೆಯಾಗದೆ ನೇರವಾಗಿ ಕೆಲವೊಂದು ಅಂಗಡಿಗಳಿಗೆ ವರ್ಗಾವಣೆಯಾಗಿದೆ ಎಂದು ಜಿಲ್ಲಾ ಪಂಚಾಯಿತಿಗೆ ದೂರು ನೀಡಲಾಗಿ ಜಿಲ್ಲಾ ಪಂಚಾಯತ್ ತನಿಖಾ ತಂಡ ಕುರಂಕೋಟೆ ಗ್ರಾಮ ಪಂಚಾಯಿತಿಗೆ ಬಂದು ಕೂಲಂಕುಶವಾಗಿ ತನಿಖೆ ನಡೆಸಿದ ಸಂದರ್ಭದಲ್ಲಿ ನಿರೀಕ್ಷೆಗೂ ಮೀರಿ ಗ್ರಾಮ ಪಂಚಾಯತಿಯಲ್ಲಿ ಹಣ ದುರುಪಯೋಗ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು , ಅಧಿಕಾರಿಗಳು ಸಣ್ಣಮಟ್ಟದ ಆರೋಪದ ಗಾಣ ಹಾಕಿದ ಸಂದರ್ಭದಲ್ಲಿ ದೊಡ್ಡ ಮಟ್ಟದ ತಿಮಿಂಗಲ ಬಲೆಗೆ ಬಿದ್ದಂತೆ 1 ಕೋಟಿ 34 ಲಕ್ಷ ಹಣ ದುರುಪಯೋಗವಾಗಿರುವುದರ ಬಗ್ಗೆ ಮೇಲ್ನೋಟದಲ್ಲಿ ಕಂಡುಬಂದಿದ್ದು ವರದಿ ನೀಡಲಾಗಿದೆ.

ಜಿಲ್ಲಾ ಪಂಚಾಯತ್ ತುಮಕೂರಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಆದೇಶದ ಮೇರೆಗೆ ವಿಶೇಷ ತನಿಕಾ ತಂಡವನ್ನು ರಚಿಸಿ ಕುರಂಕೋಟೆ ಗ್ರಾಮ ಪಂಚಾಯಿತಿಯ ದೂರಿನ ಅನ್ವಯ 3ಜನ ತಂಡ ಯೋಜನೆಯಾಗಿ ಅದರಲ್ಲಿ

ಜಿಲ್ಲಾ ಪಂಚಾಯತ್ ನ ನಾಗೇಶ್ ಲೆಕ್ಕಾಧಿಕಾರಿಗಳು ಗ್ರೇಟ್ 2. ಜಿಲ್ಲಾ ಪಂಚಾಯತ್ , ಶಶಿಧರ್. ಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ತುಮಕೂರು, ದಿನೇಶ್ ಪ್ರಥಮ ದರ್ಜೆ ಸಹಾಯಕರು ಜಿಲ್ಲಾ ಪಂಚಾಯತ್ ತುಮಕೂರು ಇವರ ತಂಡ ಕುರುಂಕೋಟೆ ಗ್ರಾಮ ಪಂಚಾಯಿತಿಗೆ ಮಾರ್ಚ್ 14 ರ 2023 ರಂದು ತನಿಖೆ ನಡೆಸಲಾಗಿ 1 ಕೋಟಿ 34 ಲಕ್ಷದ ದುರುಪಯೋಗದ ಬಗ್ಗೆ ಅವರು ವರದಿ ನೀಡಲಾಗಿ 28ಕ್ಕೂ ಹೆಚ್ಚು ಕಾಮಗಾರಿಗಳು ಪಿ ಐ ಯೋಜನೆಗೆ ಅನುಗುಣವಾಗಿ ಕಾಮಗಾರಿಗಳು ಅನುಷ್ಠಾನವಾಗದೆ ಅದೇ ಹಣವನ್ನ ನೇರವಾಗಿ ಕೆಲವೊಂದು ಅಂಗಡಿಗಳಿಗೆ ಮಾರ್ಗ ಪಲ್ಲಟದ ಮೂಲಕ ಹಣ ಬಳಸಿರುವುದು ಕಂಡುಬಂದಿದ್ದು, ಇವುಗಳ ಲೆಕ್ಕದ ಪತ್ರಗಳ ಖರ್ಚಿಗೆ ಯಾವುದೇ ವೋಚರ್ ಹಾಗೂ ಬಿಲ್ ನೀಡದಿರುವುದು ಹಣದ ದುರುಪಯೋಗಕ್ಕೆ ಸ್ಪಷ್ಟ ನಿದರ್ಶನ ನೀಡಿದಂತಾಗಿದೆ ಎಂದು ತನಿಖಾ ತಂಡ ವರದಿ ಮಾಡಲಾಗಿದೆ.

ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ ತನಿಖೆ ನಡೆಸಿದಂತ ಸಂದರ್ಭದಲ್ಲಿ ಮೇಲ್ನೋಟಕ್ಕೆ ಕಂಡು ಬಂದಂತೆ ಉದಾಹರಣೆಗೆ ಕೆಲವೇ ಕೆಲವೊಂದು ಕಾಮಗಾರಿಗಳ ವಿವರವನ್ನು ಈ ಕೆಳಕಂಡಂತೆ ನೋಡುವುದಾದರೆ

15ನೇ ಹಣಕಾಸು ಕ್ರಿಯಾ ಯೋಜನೆ ಸಂಬಂಧಪಟ್ಟಂತೆ ಘನತ್ಯಾಜ್ಯ ವಿಲೇವಾರಿ ಘಟಕ ವಾಹನ ಖರೀದಿಗೆ ಮೀಸಲಿಟ್ಟ ಹಣ,1 ಲಕ್ಷರೂ ಅನುದಾನ ಘನ ತ್ಯಾಜ್ಯ ವಿಲೇವಾರಿ ಘಟಕ ರಸ್ತೆ ನಿರ್ಮಾಣಕ್ಕಾಗಿ ಮೀಸಲಿಟ್ಟ ಹಣ ರಸ್ತೆ ಕಾಮಗಾರಿ ನಡೆಯದೆ ಆ ಹಣ ನೇರವಾಗಿ ಅಂಗಡಿ ಅಕೌಂಟ್ಗೆ ಜಮವಾಗಿದೆ,

ಎಸ್ ಸಿ ಎಸ್ ಟಿ ಅನುದಾನ ಶೇಕಡ 25 ಮೀಸಲಿಡುವ ಅನುದಾನದಲ್ಲಿ ಅದು ಕೇವಲ 1,98,817 (ಒಂದು ಲಕ್ಷ ತೊಂಬತ್ತೆಂಟು ಸಾವಿರದ ಎಂಟು ನೂರ ಹದಿನೇಳು) ರೂಗಳು, ಕುರಂಕೋಟೆ ಗ್ರಾಮ ಪಂಚಾಯಿತಿ ಮೇಲ್ಚಾವಣಿಗೆ ಸೋಲಾರ್ ಪ್ಯಾನಲ್ ಅಳವಡಿಕೆ, ಅಂಗವಿಕಲರಿಗೆ ಮೀಸಲಿಟ್ಟ ರೂ. 1,68,917 (ಒಂದು ಲಕ್ಷ ಆರವತ್ತೆಂಟು ಸಾವಿರದ ಒಂಬೈನೂರ ಹದಿನೇಳು) ಹಣ ,ಮಣ್ಣಿನಕುರಿಕೆ ಗ್ರಾಮದಲ್ಲಿ ಸಿಸ್ಟಂ ಅಳವಡಿಕೆಗೆ 50,000 ಮೀಸಲಿಟ್ಟ ಹಣ ಹಾಗೂ ಪೈಪ್ ಲೈನ್ ಎಂದು ಮೀಸಲಿಟ್ಟ 50,000 ಕಾಮಗಾರಿ ನಡೆಯದೆ ಹಣ ಅಂಗಡಿಗಳಿಗೆ ವರ್ಗಾವಣೆಯಾಗಿದೆ ಹೀಗೆ ಹತ್ತು ಹಲವು ಕಾಮಗಾರಿಗಳು ಬಗ್ಗೆ ಉಲ್ಲೇಖವಿದ್ದು ತನಿಖಾ ಸಂದರ್ಭದಲ್ಲಿ 14 ಹಾಗೂ 15 ಹಣಕಾಸು ಯೋಜನೆ ಅಡಿಯಲ್ಲಿ 1ಕೋಟಿ 34 ಲಕ್ಷದ 32ಸಾವಿರದ 437 ದೊಡ್ಡ ಮಟ್ಟದ ಹಗರಣಕ್ಕೆ ಸಂಬಂಧಿಸಿದಂತೆ 2020 –21 ಮತ್ತು 2021–22 ನೇ ಸಾಲಿನ 24, 23544 +1421305 ಒಟ್ಟು 38, 44,849 ದ ಮೊತ್ತಕ್ಕೆ ಯಾವುದೇ ಬಿಲ್ ಹಾಗೂ ವೋಚರ್ ತನಿಖಾ ಸಂದರ್ಭದಲ್ಲಿ ಹಾಜರುಪಡಿಸಿರುವುದಿಲ್ಲ ಎಂದು ತನಿಖಾ ತಂಡ ಸ್ಪಷ್ಟವಾಗಿ ವರದಿ ನೀಡಿದ್ದು, ಲೆಕ್ಕಪತ್ರದಲ್ಲಿ ಬಹಳೋಷ್ಟು ಅಸ್ಪಷ್ಟತೆ ಕಾಣುತ್ತಿದ್ದು, ಗ್ರಾಮ ಪಂಚಾಯತ್ ಸಮರ್ಪಕವಾಗಿ ಮಾಹಿತಿ ಒದಗಿಸಿ ಇರುವುದಿಲ್ಲ ಎಂದು ಉಲ್ಲೇಖಿಸಲಾಗಿದೆ ಎನ್ನಲಾಗಿದೆ.

*ಸೋಶಿಯಲ್ ಆಡಿಟ್ ವರದಿಯಲ್ಲಿ 9957453 ರೂ ಭ್ರಷ್ಟಾಚಾರ *

ಸಾಮಾಜಿಕ ಲೆಕ್ಕ ಪರಿಶೋಧಕ ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿಗಳಲ್ಲಿ ಸೋಶಿಯಲ್ ಆಡಿಟ್ ನಡೆಯುವುದು ಸಾಮಾನ್ಯವಾಗಿದ್ದು, ಅದೇ ಮಾದರಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ವರದಿ ಪ್ರಕಾರ 2021– 22ನೇ ಸಾಲಿನಲ್ಲಿ 14 ಹಾಗೂ 15 ದಿನ ಹಣಕಾಸು ಸೇರಿದಂತೆ ವರ್ಗ 1. ಅನುದಾನದಲ್ಲಿ ಸರಿಸುಮಾರು 9957453 (99 ಲಕ್ಷ 57ಸಾವಿರದ 453) ರೂಗಳಿಗೆ ಗ್ರಾಮ ಪಂಚಾಯತಿಯಲ್ಲಿ ಯಾವುದೇ ರೀತಿ ಮಾಹಿತಿ ನೀಡಿರುವುದಿಲ್ಲ ಈ ಹಣಕ್ಕೆ ಸಂಬಂಧಿಸಿದಂತೆ ಬಿಲ್ ಹಾಗೂ ವೋಚರ್ ಆಡಿಟಿಂಗ್ ಸಂದರ್ಭದಲ್ಲಿ ಒದಗಿಸಿ ಇರುವುದಿಲ್ಲ ಎಂದು ಸಾಮಾಜಿಕ ಲೆಕ್ಕಪರಿಶೋಧನಾ ಸಮಿತಿ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ.




*ಲೋಕಲ್ ಆಡಿಟ್ ನಲ್ಲೂ ಬೈಲಾದ ಭ್ರಷ್ಟಾಚಾರ *

ಪ್ರತಿ ಗ್ರಾಮ ಪಂಚಾಯತಿಯಲ್ಲಿಯೂ ಲೋಕಲ್ ಆಡಿಟ್ ಪ್ರತಿ ವರ್ಷಕ್ಕೊಮ್ಮೆ ಗ್ರಾಮ ಪಂಚಾಯತಿಯ ಎಲ್ಲಾ ರೀತಿಯ ಲೆಕ್ಕಪತ್ರ ಪರಿಶೋಧನೆ ನಡೆಸಿ ಅಂತಿಮವಾಗಿ ತಾಲೂಕ್ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗೆ ವರದಿ ನೀಡುವುದು ವಾಡಿಕೆಯಾಗಿದ್ದು, ಅದೇ ಮಾದರಿಯಲ್ಲಿ ಕುರಂಕೋಟೆ ಗ್ರಾಮ ಪಂಚಾಯತಿಯಲ್ಲಿಯೂ 20 20 –21 ಹಾಗೂ 2021– 22, ಸಾಲಿನಲ್ಲಿ ಲೋಕಲ್ ಆಡಿಟಿಂಗ್ ಅಂದಿನ ಆರ್. ರೇವಣ್ಣ. ಜಂಟಿ ನಿರ್ದೇಶಕರು, ರೇಣುಕಮ್ಮ ಲೆಕ್ಕ ಅಧ್ಯಕ್ಷೆ,

ಪಿಎನ್ ನೀಲಮ್ಮ ಲೆಕ್ಕಪರಿಶೋಧಕ್ಕೆ ಇವರ ತಂಡ ತನಿಖೆ ನಡೆಸಲಾಗಿ 1 ಕೋಟಿ 34 ಲಕ್ಷ ರೂಗಳಿಗೆ ಯಾವುದೇ ರೀತಿಯಲ್ಲಿ ಬಿಲ್ ಹಾಗೂ ವೋಚರ್ ಆಡಿಟಿಂಗ್ ಸಂದರ್ಭದಲ್ಲಿ ಸಲ್ಲಿಸಿರೋದಿಲ್ಲ ( ಸಬ್ಮಿಟ್ )ಮಾಡಿರೋದಿಲ್ಲ ಎಂದು ತಮ್ಮ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕುಡಿಯುವ ನೀರು ಮತ್ತು ಬೀದಿ ದೀಪಕ್ಕೆ ಶೇಕಡ 95%

ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ 2020 –21 ಹಾಗೂ 2021 22ಸಾಲಿನಲ್ಲಿ ಬಹುತೇಕ 90% ಅನುದಾನವನ್ನ ಕೇವಲ ಕುಡಿಯುವ ನೀರು ಹಾಗೂ ಬೀದಿ ದೀಪಕ್ಕೆ ಕೆಲವೊಂದು ಕಮಿಟ್ಮೆಂಟ್ ಮಾಡಿಕೊಂಡಿರುವ ಎಲೆಕ್ಟ್ರಿಕಲ್ ಅಂಗಡಿಗಳಿಗೆ ಚೆಕ್ ವಿತರಣೆಯಾಗಿದ್ದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಿರುವ ಅನುದಾನ ಸಹ ಕುಡಿಯುವ ನೀರು ಬೀದಿ ದೀಪಕ್ಕೆ ಬಳಕೆಯಾಗಿದೆ, ಅಂಗವಿಕಲ ಅನುದಾನ, ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರ ಅನುದಾನದಲ್ಲೂ ದೋಕ, ಸರ್ಕಾರದ ಮಾರ್ಗದರ್ಶನದಂತೆ ಎಸ್ ಸಿ ಎಸ್ ಟಿ ಮೀಸಲಾತಿ ಸಹ ದುರ್ಬಳಕೆಯಾಗಿದ್ದು ಇಲ್ಲಿ ಪಿಡಿಒಗಳು ತಮ್ಮ ಮನಸ್ಸು ಇಚ್ಛೆ ಹಣಬಳಕೆಯಾಗಿರುವುದು ಸ್ಪಷ್ಟವಾಗಿದೆ.

ಸತತ ಮಳೆ ಸಮೃದ್ಧಿ ಕಾಲದಲ್ಲೂ ಕುಡಿಯುವ ನೀರಿಗೆ ಬಳಕೆ ಗ್ರಾ. ಪಂ ದುರ್ಬಳಕೆಗೆ ಸಾಕ್ಷಿ

ಬಹಳ ಆಶ್ಚರ್ಯಕರ ವಿಚಾರ ಎಂದರೆ 2021– 22 ನೇ ಸಾಲು ಸತತ ಮಳೆಯಿಂದ ಬಹಳ ಸಮೃದ್ಧಿಯಾದಂತ ಸಂದರ್ಭ ಈ ಸಂದರ್ಭದಲ್ಲಿ ಈ ಗ್ರಾಮ ಪಂಚಾಯಿತಿಯಲ್ಲಿ ಯಾವ ಗ್ರಾಮದಲ್ಲೂ ಯಾವುದೇ ರೀತಿಯಲ್ಲಿ ನೀರಿನ ಬಳಕೆಗೆ ಸರಾಸರಿ 10% ಸಹ ಖರ್ಚು ಮಾಡದ ಸಂದರ್ಭದಲ್ಲಿಯೂ ಈ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು 90% ಅನುದಾನವನ್ನ ಕುಡಿಯುವ ನೀರಿಗೆ ಹಾಗೂ ಬೀದಿ ದೀಪಗಳಿಗೆ ಬಳಸಲಾಗಿದೆ .

ಬೀದಿ ದೀಪಕ್ಕೆ ಶೇಕಡ 95% ಅನುದಾನ ಬಳಕೆ

ಗ್ರಾಮ ಪಂಚಾಯತಿಗಳಲ್ಲಿ ಬೀದಿ ದೀಪ ಖರೀದಿಗೆ ಬಹುತೇಕ ಎಲ್ಲಾ ಬಲ್ಬ್ ಹಾಗೂ ವೈರ್ ಖರೀದಿಗಳಲ್ಲಿ ವಾರಂಟಿ ಇದ್ದೇ ಇರುತ್ತದೆ ವರ್ಷದ ಒಳಗೆ ಬಲ್ಪ ಬರ್ನಾದರೆ ರಿಟರ್ನ್ ವಾರಂಟಿ ಇರುತ್ತದೆ ಅದೇ ಮಾದರಿಯಲ್ಲಿಯೇ ಪ್ರತಿ ಗ್ರಾಮ ಪಂಚಾಯತಿಯಲ್ಲೂ ಸರಿ ಸುಮಾರು ಕನಿಷ್ಠಪಕ್ಷ 6–8 ತಿಂಗಳು ಒಂದು ಬಾರಿ ಹಾಕಿದ ಎಲ್ಇಡಿ ಬಲ್ಪ್ ಇದ್ದೇ ಇರುತ್ತದೆ ಆದರೆ ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ ಇದಕ್ಕೆ ವಿರುದ್ಧ ಎಂಬುವಂತೆ ಗ್ರಾಮ ಪಂಚಾಯತಿಯ ಅನುದಾನದ ಶೇಕಡ 60% ಅನುದಾನ ಬೀದಿ ದೀಪಕ್ಕೆ ಬಳಸಲಾಗಿದೆ,

ಇದು ಎಲ್ಲರಿಗೂ ತಿಳಿದಿರುವ ವಿಚಾರನೇ ಕುಡಿಯುವ ನೀರು ಹಾಗೂ ಬೀದಿ ದೀಪ ಎಂದು ಬಿಲ್ಲು ಸಾಮಾನ್ಯವಾಗಿ ತಮಗೆ ಅಂಡಸ್ಟ್ಯಾಂಡಿಂಗ್ ಇರುವಂತಹ ಅಂಗಡಿಗಳಿಗೆ ಚೆಕ್ ನೀಡಿ ವಾಪಸ್ ಹಣ ಪಿಕುವುದು ಜಗತ್ ಜಾಹೀರಾ , ಇಲ್ಲಿಯೂ ಎಲ್ಲರ ಊಹೆಗೂ ಮೀರಿ ಕುಡಿಯುವ ನೀರು ಹಾಗೂ ಬೀದಿ ದೀಪಗಳಿಗೆ ದುರ್ಬಳಕೆಯಾಗಿದೆ ಎಂಬುದು ಕೆಲವು ಗ್ರಾಮ ಪಂಚಾಯಿತಿ ಸದಸ್ಯರ ವಾದವಾಗಿದೆ.

ಎಸ್ಸಿಎಸ್ಟಿ ಅನುದಾನ ಹಾಗೂ ಅಂಗವಿಕಲ ಅನುದಾನಕ್ಕೂ ಕೊಕ್ಕೆ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನರಿಗೆ ಶೇಕಡ 25% ಅನುದಾನ ಮೀಸಲಿಟ್ಟು ಈ ಜನಾಂಗಕ್ಕೆ ಪ್ರತ್ಯೇಕ ಅನುದಾನಗಳ ಬಳಕೆಯಿಂದ ಮೇಲೆತ್ತುವ ಕಾರ್ಯಕ್ಕಾಗಿ ಸರ್ಕಾರ ನಿಯಮಾವಳಿ ರೂಪಿಸಿ ಗ್ರಾಮ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆಗೊಳಿಸಿದರು ಇಲ್ಲಿನ ಕೂರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರದ ಯಾವುದೇ ನಿಯಮವನ್ನು ಪಾಲಿಸದೆ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪಿಡಿಒ ಸರ್ವಾಧಿಕಾರಣೆ ಧೋರಣೆ ತಾಳಿ ಎಸ್ಸಿ ಎಸ್ಟಿ ಅನುದಾನ ಹಾಗೂ ಅಂಗವಿಕಲರ ಅನುದಾನವನ್ನ ಬಳಕೆ ಮಾಡದೆ ದುರುಪಯೋಗಪಡಿಸಿಕೊಂಡು ಇದರ ಅನುದಾನವನ್ನು ಕುಡಿಯುವ ನೀರು ಹಾಗೂ ಬೀದಿ ದೀಪಕ್ಕೆ ವಿನಿಯೋಗಿಸಲಾಗಿದೆ ಅದು ನೆಪ ಮಾತ್ರ ಕುಡಿಯುವ ನೀರು ಬೀದಿ ದೀಪ ಎನ್ನಲಾಗುತ್ತಿದ್ದು ಇದು ಭ್ರಷ್ಟಾಚಾರದ ಕೂಪ ವಾಗಿದೆ ಎಂದು ಗ್ರಾಮ ಪಂಚಾಯತಿ ಸದಸ್ಯರು ದೋರುತಿದ್ದಾರೆ.

ವರ್ಗ1 ಅನುದಾನವೂ ಕುಡಿಯುವ ನೀರು ಬೀದಿ ದೀಪಕ್ಕೆ ಬಳಕೆ

ಗ್ರಾಮ ಪಂಚಾಯತಿಯ ವರ್ಗ 1ರ ವಸುಲಾತಿ ಹಣ ಸಾಮಾನ್ಯವಾಗಿ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂತೆ ಸಣ್ಣಪುಟ್ಟ ವ್ಯವಹಾರಗಳು ಸೇರಿದಂತೆ ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿ, ತತಕ್ಷಣಕ್ಕೆ ಗ್ರಾಮ ನೈರ್ಮಲ್ಯ, ಬೀದಿ ದೀಪ, ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ದಾಖಲಾತಿ ಪುಸ್ತಕಗಳ ಖರೀದಿ ಸೇರಿದಂತೆ ಇನ್ನಿತರ ವಿಚಾರಗಳಿಗೆ ಬಳಸುವುದು ಸಾಮಾನ್ಯ ಆದರೆ ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ 25 ಲಕ್ಷಕ್ಕೂ ಹೆಚ್ಚು ಅನುದಾನವನ್ನ 14 ಹಾಗೂ 15 ಹಣಕಾಸಿನ ಜೊತೆ ಜೊತೆಯಲ್ಲಿ ಕುಡಿಯುವ ನೀರು ಹಾಗೂ ಬೀದಿ ದೀಪ ಎಂದು ಕೆಲವೊಂದು ಎಲೆಕ್ಟ್ರಿಕಲ್ ಅಂಗಡಿಗಳಿಗೆ ನೇರವಾಗಿ ವಿಚರಿಸಲಾಗಿದೆ, ಇದರಲ್ಲೂ ಸಹ ಬಹಳಷ್ಟು ಅವ್ಯಹರವಾಗಿದೆ ಎಂದು ಗ್ರಾಮ ಪಂಚಾಯಿತಿ ಸದಸ್ಯರುಗಳು ಆರೋಪಿಸುತ್ತಿದ್ದಾರೆ.

ಅಧ್ಯಕ್ಷ ಸದಸ್ಯರ ಗೌರವ ಧನಕ್ಕೂ ಕತ್ರಿ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಸಾಮಾನ್ಯವಾಗಿ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರಿಗಳಿಗೆ ಪ್ರತಿ ಮೀಟಿಂಗ್ಗಳಿಗೂ ಭಾಗವಹಿಸುವ ದೃಷ್ಟಿಯಿಂದ ಪ್ರತಿ ಸದಸ್ಯರುಗಳಿಗೂ ಗೌರವಧನ ನೀಡಲಾಗುತ್ತಿದ್ದು ಸರ್ಕಾರ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿಗೆ ನೀಡುವ ಅನುದಾನವದಲ್ಲೂ ಸಹ ಕುರಂ ಕೋಟೆ ಗ್ರಾಮ ಪಂಚಾಯಿತಿ 8 ತಿಂಗಳ ಗೌರವ ಧನಕ್ಕೆ ಕತ್ರಿ ಯಾಕೆ 1 ಲಕ್ಷ 57ಸಾವಿರ ಹಣವನ್ನ ಚುನಾಯಿತ ಪ್ರತಿನಿಧಿಗಳಿಗೆ ವಿತರಿಸದೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಕೆಲವು ಗ್ರಾಮ ಪಂಚಾಯತಿ ಸದಸ್ಯರುಗಳು ದೂರುತ್ತಿದ್ದಾರೆ.

ಎಸ್ಟಿಮೆಂಟು ಇಲ್ಲ ಎಂ ಬಿ ಯೂ ಇಲ್ಲ

ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ 2020 – 21 ಹಾಗೂ 2021 –22ನೇ ಸಾಲಿನಲ್ಲಿ ಆಕ್ಷನ್ ಪ್ಲಾನ್, ಎಷ್ಟು ಮೆಂಟ್, ಎಂಬಿ ಬಹುತೇಕ ಬಹಳಷ್ಟು ಗ್ರಾಮ ಪಂಚಾಯಿತಿಯ ಎಸ್ಟಿಮೆಂಟಲ್ಲಿ ಇರುವಂತಹ ಕಾಮಗಾರಿಗಳ ಕಾಮಗಾರಿಗಳೇ ನಡೆದಿರುವುದಿಲ್ಲ, ಇನ್ನು ಜಿಲ್ಲಾ ಪಂಚಾಯತಿಯಲ್ಲಿ ಇಂಜಿನಿಯರ್‌ಗಳು ಹೆಂಗೆ ಎಂ ಬಿ ಬರೆಯೋದಕ್ಕೆ ಸಾಧ್ಯ ಹಾಗಾಗಿ ಬಹಳ ಸುಲಭವಾಗಿ ಯಾವುದೇ ಎಸ್ಟಿಮೆಂಟ್ ಹಾಗೂ ಎಂಬಿ ಗೋಜಿಗೆ ಹೋಗದೆ ಗ್ರಾಮ ಪಂಚಾಯತಿ ಬಹಳ ಸುಲಭವಾಗಿ ಕುಡಿಯುವ ನೀರು ಹಾಗೂ ಬೀದಿ ದೀಪಕ್ಕೆ ಬಹುತೇಕ ಎಲ್ಲಾ ಕಾಮಗಾರಿಗಳ ಅನುದಾನವನ್ನ ಬಳಕೆ ಮಾಡಿಕೊಳ್ಳಲಾಗಿದೆ, ಇದು ಗ್ರಾಮ ಪಂಚಾಯತಿಯ ದೊಡ್ಡ ಬ್ರಷ್ಟಾಚಾರಕ್ಕೆ ಹಿಡಿದ ಕೈ ಗನ್ನಡಿಯಾಗಿದೆ, ಇದರ ವಿರುದ್ಧ ಅಲ್ಲಿನ ಗ್ರಾಮ ಪಂಚಾಯಿತಿರುವವರು ಸಹ ಬಹಳಷ್ಟು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಜಿಲ್ಲಾ ಪಂಚಾಯತ್ ಸಿಇಒ ಪ್ರಭುಗೆ ಜೈ ಎಂದ ಸದಸ್ಯರು

ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ 1 ಕೋಟಿ 34 ಲಕ್ಷದ ದೃಷ್ಟಿ ಅಪಾರ ಹಣ ದುರುಪಯೋಗವಾಗಿದೆ ಎಂಬ ಮಾಹಿತಿ ಆಧರಿಸಿ ಕುಪಿತಗೊಂಡ ತುಮಕೂರು ಜಿಲ್ಲಾ ಪಂಚಾಯತಿ ಸಿಇಒ ಪ್ರಭು ತತಕ್ಷಣ ಜಾರಿಗೆ ಬರುವಂತೆ ಅಂದಿನ ಪಿಡಿಒ ಸುನಿಲ್ ಅಮಾನತುಗೊಳಿಸುವಂತೆ ಆದೇಶಿಸಿ ಕ್ರಮಕೈಕೊಂಡರು , ಇದಕ್ಕೆ ಹಣ ದುರುಪಯೋಗದ ಬಗ್ಗೆ ಗಮನ ಸೆಳೆದಿದ್ದ ಸದಸ್ಯರಿಗೆ ಸ್ವಲ್ಪ ಮುಟ್ಟಿನ ಸಮಾಧಾನವಾದರೂ 1 ಕೋಟಿ 30 ಲಕ್ಷದಲ್ಲಿ ಪಾಲುದಾರಿಕೆ ಹೊಂದಿರುವ ಮತ್ತೋರ್ವ ನಾಗರಾಜು ಹಾಗೂ ಅಧ್ಯಕ್ಷೆ ರೇಖಾ ವಿರುದ್ಧ ಕ್ರಮ ಕೈಗೊಳ್ಳದಿರುವುದು ಬೇಸರ ಮೂಡಿಸಿದೆ ಎಂದು ಗ್ರಾಮ ಪಂಚಾಯತಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಲೋಕಾಯುಕ್ತ ಹಾಗೂ ಜಿಲ್ಲಾ ಪಂಚಾಯತ್ ಆಯುಕ್ತಾಲಯ ತಲುಪಿದ ಪ್ರಕಾರ

ಕುರಂಕೋಟೆ ಗ್ರಾಮ ಪಂಚಾಯಿತಿಯಲ್ಲಿ 1ಕೋಟಿ 31 ಲಕ್ಷ ಅನುದಾನ ದುರ್ಬಳಕೆಯಾಗಿದೆ ಎಂಬ ಪ್ರಕರಣ ಲೋಕಾಯುಕ್ತಕ್ಕೆ ಹಾಗೂ ಬೆಂಗಳೂರಿನ ಜಿಲ್ಲಾ ಪಂಚಾಯತ್ ಆಯುಕ್ತಾಲಯದಲ್ಲಿ ತನಿಖೆ ನಡೆಯುತ್ತಿದ್ದು,

ಇ;ದೇ ತಿಂಗಳ ಜೂನ್ 29ಕ್ಕೆ ಲೋಕಾಯುಕ್ತ ಕೋರ್ಟಿನ ನ್ಯಾಯಾಲಯಕ್ಕೆ ಪ್ರಕರಣ ಬರಲಿದ್ದು, ಲೋಕಾಯುಕ್ತರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕಾದು ನೋಡಬೇಕಿದ್ದು ಜೊತೆಗೆ ಬೆಂಗಳೂರಿನ ಪಂಚಾಯತ್ ರಾಜ್ಯ ಆಯುಕ್ತಲಯದಲ್ಲಿ ಪಿಡಿಒ ಅಮಾನತುಗೊಳಿಸಿದರೆ ಸಾಲದು ಉಳಿದಂತೆ ಮತ್ತೋರ್ವ ಪಿಡಿಒ ಹಾಗೂ ಅಧ್ಯಕ್ಷರ ಸದಸ್ಯತ್ವವನ್ನು ಅಮಾನತುಗೊಳಿಸುವಂತೆ ಸಲ್ಲಿಸಲಾದ ದೋಷಾರೋಪ ಪಟ್ಟಿ ಆಯುಕ್ತಲಯದ ನ್ಯಾಯಾಲಯದಲ್ಲಿ ಚರ್ಚೆ ನಡೆಯುತ್ತಿದ್ದು ಮುಂದಿನ ದಿನಗಳಲ್ಲಿ ಯಾವ ತಿರುವು ಪಡೆಯುತದೆಯ್ಯೂ ಕಾದು ನೋಡಬೇಕಾಗಿದೆ.

ಒಟ್ಟಾರೆ ಕುರಂಕೋಟೆ ಗ್ರಾಮ ಪಂಚಾಯಿತಿಯ ಭ್ರಷ್ಟಾಚಾರದ ಕೂಪ ಇಷ್ಟು ದೊಡ್ಡ ಮಟ್ಟಗಿದೆ ಎಂದು ಅಲ್ಲಿನ ಗ್ರಾಮ ಪಂಚಾಯತಿ ಸದಸ್ಯರಿಗೂ ತಿಳಿದಿರಲಿಲ್ಲ ಎನ್ನಲಾಗಿದ್ದು, ಅವರು ಕೇವಲ 12 ಲಕ್ಷ ಅನುದಾನ ದುರ್ಬಳಕೆಯಾಗಿದೆ ತನಿಖೆ ನಡೆಸಿ ಎಂದು ದೂರಲಾದ ದೂರಿನ ಅನ್ವಯ ಜಿಲ್ಲಾ ಪಂಚಾಯಿತಿ ತನಿಖಾ ತಂಡ ನಡೆಸಿದ ಕೂಲಂಕುಶವಾದ ತನಿಕೆಯಲ್ಲಿ ಸೋಶಿಯಲ್ ಆಡಿಟ್, ಹಾಗೂ ಲೋಕಲ್ ಆಡಿಟ್ ಎರಡರಲ್ಲೂ ಕೋಟ್ಯಾಂತರ ರೂ ಅನುದಾನ ದುರ್ಬಳಕೆಯಾಗಿದೆ ಅದಕ್ಕೆ ಸಂಬಂಧಪಟ್ಟಂತ ವೋಚರ್ ಹಾಗೂ ಬಿಲ್ ನಾವು ಆಡಿಟ್ ಮಾಡುವ ಸಂದರ್ಭದಲ್ಲಿ ಯಾವುದೇ ಬಿಲ್ ಗಳನ್ನು ನೀಡಿರುವುದಿಲ್ಲ ಎಂದು ಉಲ್ಲೇಖಿಸಲಾಗಿದ್ದು, ನಂತರ ಬಂದ ಜಿಲ್ಲಾ ಪಂಚಾಯಿತಿ ತನಿಖಾ ದಂಡ ಗ್ರಾಮ ಪಂಚಾಯಿತಿಯ ಎಲ್ಲಾ ಕಡತಗಳನ್ನು ಪರಿಶೀಲಿಸಿದಾಗ ಅವರಿಗೂ ಸಹ 1 ಕೋಟಿ 30 ಲಕ್ಷ ಅನುದಾನ ದುರುಪಯೋಗ ವಾಗಿರುವುದು ಕಂಡುಬಂದು ಅವರು ಸಹ ಸ್ಪಷ್ಟವಾಗಿ ಗ್ರಾಮ ಪಂಚಾಯಿತಿ ಲೋಪಗಳ ಬಗ್ಗೆ ಸ್ಪಷ್ಟಿಕರಿಸಿದ್ದಾರೆ ಎನ್ನಲಾಗುತ್ತಿದ್ದು,

ಇದರ ಅನ್ವಯ ಭ್ರಷ್ಟಾಚಾರದ ಆರೋಪ ಲೋಕಾಯುಕ್ತ ಹಾಗೂ ಬೆಂಗಳೂರು ಪಂಚಾಯತ್ ರಾಜ್ ಆಯುಕ್ತ ಲಯದ ಅಂಗಳದಲ್ಲಿದ್ದು, ಒಬ್ಬರ ಪಿಡಿಒ ಸುನಿಲ್ ಇಂದಿನ ಸಿ ಓ ಪ್ರಭು ಅವರ ಆದೇಶದ ಅನ್ವಯ ತಲೆದಂಡವಾಗಿದ್ದು, ಉಳಿದ ಮತ್ತೋರ್ವ ಪಿಡಿಒ , ಅಧ್ಯಕ್ಷರು ಮೇಲೆ ತೂಗು ಕತ್ತಿ ಹಾಡುತ್ತಿತ್ತು ಯಾರ ತಲೆದಂಡವಾಗುತ್ತದೆ ಕಾದು ನೋಡಬೇಕಿದೆ, ಒಟ್ಟಾರೆ ಭ್ರಷ್ಟ ಅಧಿಕಾರಿಗಳಿಗೆ ತನಿಖಾ ಇಲಾಖೆಗಳು ಸಮರ್ಪಕವಾಗಿ ಬಿಸಿ ಮುಟ್ಟಿಸಿದ್ದೆ ಆದರೆ ಇತರೆ ತಾಲೂಕು ಜಿಲ್ಲೆ ರಾಜ್ಯ ಸೇರಿದಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಇದೊಂದು ಪ್ರಕರಣ ಎಚ್ಚರಿಕೆ ಗಂಟೆಯಾಗಲಿದೆ ಎಂಬುದು ದೋಷಾರೋಪ ಮಾಡುತ್ತಿರುವ ಗ್ರಾಮ ಪಂಚಾಯಿತಿ ಸದಸ್ಯರುಗಳ ಮನವಿ ಯಾಗಿದೆ, ಜೊತೆಗೆ ಇದರ ತಾರ್ಕಿಕ ಹಂತ ಭ್ರಷ್ಟಾಚಾರ ಅಧಿಕಾರಿಗಳ ಕಡಿವಾಣಕ್ಕೆ ಲೋಕಾಯುಕ್ತ ಮತ್ತು ಬೆಂಗಳೂರು ಆಯುಕ್ತಾಲಯ ತೀರ್ಪು ಇತರ ಗ್ರಾಮ ಪಂಚಾಯಿತಿಗಳಿಗೆ ಎಚ್ಚರಿಕೆಯ ಗಂಟೆಯಾಗಲಿದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಗುರುವಾರ 20 ಜೂನ್ 2024
THURSDAY 20 June 2024


# ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧತೆಯಿಂದ ಕೆಲಸ ಮಾಡುವೆ ಎಂದು ಶಾಸಕ ಹೆಚ್.ಟಿ.ಮಂಜು

ಕೆ.ಆರ್.ಪೇಟೆ: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧತೆಯಿಂದ ಕೆಲಸ ಮಾಡುವೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಲೋಕೋಪಯೋಗಿ ಇಲಾಖೆಯ ಅನುದಾನದಲ್ಲಿ.ಕೆ ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಗ್ರಾಮದ ಕಿಕ್ಕೇರಿ ಗ್ರಾಮದಲ್ಲಿ ಎರಡು ಕೋಟಿ ರಸ್ತೆ ಕಾಮಗಾರಿ ಹಾಗೂ ಕಿಕ್ಕೇರಿ ಕೆಇಬಿ ಗೇಟ್ ನಿಂದ ರಾಮನಹಳ್ಳಿ ಸಮೀಪದ ವರೆಗೆ ಎರಡು ಕೋಟಿ ಒಟ್ಟು ನಾಲ್ಕು ಕೋಟಿ ರೂ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.ಕ್ಷೇತ್ರದ ಜನರು ಸಾಕಷ್ಟು ನಿರೀಕ್ಷೆಯೊಂದಿಗೆ ನನ್ನನ್ನು ಆಯ್ಕೆ ಮಾಡಿದ್ದಾರೆ. ಆದರೆ ವಿರೋಧ ಪಕ್ಷದ ಶಾಸಕರಾಗಿ ಪ್ರಸ್ತುತ ವಿರುವ ಸರ್ಕಾರ ಬಿಟ್ಟಿ ಭಾಗ್ಯಗಳಿಂದ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗಿದೆ ಆದರೆ ಹಾಗೆಂದು ಸುಮ್ಮನೆ ಕೂರುವ ಶಾಸಕ ನಾನಲ್ಲ ನನ್ನ ರಾಜಕೀಯ ಜೀವನದುದ್ದಕ್ಕೂ ಹೋರಾಟ ಮಾಡುತ್ತಲೇ ಬಂದಿದ್ದೇನೆ ಆ ಮಾದರಿಯಲ್ಲಿ ಮುಂದಿನ ದಿನಗಳಲ್ಲಿ ಹೋರಾಟದ ಮೂಲಕವೇ ನನ್ನ ಕ್ಷೇತ್ರಕ್ಕೆ ಅನುದಾನತಂದು ಪ್ರತಿ ಗ್ರಾಮದ ಮೂಲಸೌಕರ್ಯಗಳ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಿ,ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರ ನಂಬಿಕೆ ಉಳಿಸಿಕೊಳ್ಳುವೆ ಎಂದರು. ನಾನು ಕಾಲಹರಣ ಮಾಡುವ ಶಾಸಕನಲ್ಲ ಹಿಂದುಳಿದ ಕ್ಷೇತ್ರದಲ್ಲಿ



ಹೊಸ ಬದಲಾವಣೆ ತರಲು ಶಾಸಕನಾಗಿರುವೆ. ನನ್ನ ಕನಸು ಸಾಕಾರಗೊಳಿಸಲು ಎಲ್ಲರೂ ಸಹಕಾರ ನೀಡಬೇಕು.ಆದ್ದರಿಂದ ಕಾಮಗಾರಿಗಳ ನಡೆಯುವ ಸ್ಥಳದಲ್ಲಿಯೇ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದ್ದು, ಉತ್ತಮ ಗುಣ ಮಟ್ಟದ ಕಾಮಗಾರಿಯನ್ನು ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕು ಎಂದರು.

ಗುಣಮಟ್ಟದ ಕಾಮಗಾರಿಗೆ ಮೊದಲ ಆದ್ಯತೆ ಇತ್ತೀಚಿನ ದಿನಗಳ ಕೆಲ ಗುತ್ತಿಗೆದಾರರು ಸಂಪೂರ್ಣ ಕಳಪೆ ಕಾಮಗಾರಿಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ ಹಿನ್ನೆಲೆಯಲ್ಲಿ ಸ್ಥಳದಲ್ಲಿದ್ದ ಗುತ್ತಿಗೆದಾರನ ಆಪ್ತ ಸಹಾಯಕ ಚಿದಾನಂದನಿಗೆ ಗುಣಮಟ್ಟದ ಕಾಮಗಾರಿ ಮೊದಲ ಆದ್ಯತೆ ಇರಲಿ ಎಂದು ಶಾಸಕ ಹೆಚ್.ಟಿ ಮಂಜು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕಿಕ್ಕೇರಿ ಹೋಬಳಿಯ ಜೆಡಿಎಸ್ ಅಧ್ಯಕ್ಷ ಕಾಯಿ ಮಂಜೇಗೌಡ, ಕಿಕ್ಕೇರಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಶೇಖರ್, ಮುಖಂಡ ಕೃಷ್ಣೆಗೌಡ ,ಶ್ರೀ ಧರ್ಮಸ್ಥಳದ ಜನಜಾಗೃತಿಯ ಜಿಲ್ಲಾ ನಿರ್ದೇಶಕ ಮೊಟ್ಟೆ ಮಂಜು,ಮಾರ್ಗೋನಹಳ್ಳಿ ಮಂಜುನಾಥ್,ಜೆಡಿಎಸ್ ಮುಖಂಡ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಾಜು,ಸಹಾಯಕ ಕಾರ್ಯಪಾಲಕ ಮಂಜುನಾಥ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಾಜು, ಸಹಾಯಕ ಕಾರ್ಯಪಾಲಕ ಮಂಜುನಾಥ್,ರಾಮನಹಳ್ಳಿ ರೈತ ಸಂಘದ ಮಂಜೇಗೌಡ, ಡೈರಿ ಕುಮಾರ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್,ಅನಿಲ್, ರಾಕೇಶ್,ಸೇರಿದಂತೆ ಉಪಸ್ಥಿತರಿದ್ದರು

– ಮನು ಮಾಕವಳ್ಳಿ
ಕೆಆರ್‌ಪೇಟೆ

## ದಂಡಿನ ಮಾರಮ್ಮ ದೇವಿಗೆ ವಿಶೇಷ ಅಲಂಕಾರ ಮತ್ತು ಪೂಜೆ ಸಂಪನ್ನ



ಮಧುಗಿರಿ ಪಟ್ಟಣದ ಇತಿಹಾಸ ಪ್ರಸಿದ್ಧ ದಂಡಿನ ಮಾರಮ್ಮನ ದೇವಸ್ಥಾನದಲ್ಲಿ ಮಂಗಳವಾರ ದೇವಿಗೆ ವಿಶೇಷ ಅಲಂಕಾರ ಮತ್ತು ವಿಶೇಷ ಪೂಜೆಯನ್ನು ನಡೆಸಲಾಯಿತು.

ರಾಜ್ಯ ಮಾತ್ರವಲ್ಲದೆ ನೆರೆ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶದಿಂದ ಭಕ್ತರುಗಳ ಆಗಮಿಸಿ ದೇವಿಯ ದರ್ಶನವನ್ನು ಪಡೆದರು.

ದೇವರ ದರ್ಶನಕ್ಕೆ ಬಂದಿದ್ದ ಭಕ್ತರಿಗೆ ದೇವಾಲಯ ಸಮಿತಿಯ ವತಿಯಿಂದ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

## ಅರಳುವ ಪ್ರತಿಭೆಗೆ ಅರಿವಿನ ಆಸರೆ



ಇಂದು ನಡೆದ ಕೆಳದಿಪುರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅರವಿಂದ ಟ್ರಸ್ಟ್ ನವರು ಅರಳುವ ಪ್ರತಿಭೆಗೆ ಅರಿವಿನ ಆಸರೆ ಎಂಬ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ಗಳನ್ನು ವಿತರಿಸಿದರು ಹಾಗೆ 25 ಶಾಲೆಗಳಿಗೂ ಹೆಚ್ಚಿನ ರೀತಿಯಲ್ಲಿ ನೋಟು ಬುಕ್ಕುಗಳನ್ನು ವಿತರಣೆ ಮಾಡಿ ಯಾರು ಚೆನ್ನಾಗಿ ಓದುತ್ತಿರೋ ಅಂತವರಿಗೆ ನಮ್ಮ ಸಂಸ್ಥೆಯಿಂದ ಮುಂದಿನ ವರ್ಷ ಬಹುಮಾನ ವಿತರಣೆ ಮಾಡುತ್ತೇವೆ ಎಂದು ಮಕ್ಕಳನ್ನು ಉರಿದುಂಬಿಸಿ ಮಾತಾನಾಡಿ ನಾವುಗಳು ಸುಮಾರು 30 ಜನರ ತಂಡ ಈ ಸಂಸ್ಥೆಯನ್ನು ಹುಟ್ಟು ಹಾಕಿದ್ದು ನಮ್ಮ ಆದಾಯದಲ್ಲಿ ಶೆಕಡಾ 5% ರಷ್ಟು ಹಣವನ್ನು ಈ ಕೆಲಸಕ್ಕೆ ಮೀಸಲಿಟ್ಟಿದ್ದೇವೆ.ಕಳೆದ ಮೂರು ವರ್ಷಗಳ ಕಾಲ ಈ ಕೆಲಸ ಮಾಡ್ತಾ ಇದ್ದು ನಾವು ರಕ್ತದಾನದ ಮೂಲಕ ಸೇವೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಮಾಡ್ತಾ ಇದಿವಿ ಎಂದರು .ಶಾಲಾ ಆಡಳಿತ ಮಂಡಳಿಯ ಎಸ್ ಟಿ ಎಂ ಸಿ ಅಧ್ಯಕ್ಷರು ಹಾಗೂ ಮುಖ್ಯ ಉಪಾಧ್ಯಾಯರು ಹಾಗೂ ಪೋಷಕರು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು ಇದೇ ಸಮಯಕ್ಕೆ ಕೆಳದಿ ಗ್ರಾಮ ಪಂಚಾಯಿತಿ ನೀರು ಗಂಟೆ ಉಮೇಶ್ ಅವರು ಆಗಮಿಸಿ ಪೋಷಕರಿಗೂ ಹಾಗೂ ಮಕ್ಕಳಿಗೂ ಡೆಂಗ್ಯೂ ಜ್ವರದ ಬಗ್ಗೆ ಮಾಹಿತಿ ಹೇಳಿದರು ಹಾಗೂ ನಿಮ್ಮ ಊರಿನಲ್ಲಿ 25ಕ್ಕೂ ಹೆಚ್ಚು ಜನ ದೆಂಗುಪೀಡಿತರಿದ್ದಾರೆ ಆದಷ್ಟು ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ ಎಂದು ಮಕ್ಕಳಿಗೂ ಹಾಗೂ ಪೋಷಕರಿಗೂ ವಿವರಿಸಿ ಹೇಳಿದರು.




## ಮಕ್ಕಳನ್ನು ಸ್ವಾಗತಿಸಲು ಶಾಲೆಗಳಲ್ಲಿ ನಿರ್ಮಾಣವಾದ ಹಬ್ಬದ ವಾತಾವರಣ

ತಾಲೂಕಿನ ಕೋಡಿಗೇನಹಳ್ಳಿ ಹೋಬಳಿಯ ಕಡಗತ್ತೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಹಬ್ಬದ ವಾತವರಣವೇ ನಿರ್ಮಾಣವಾಗಿತ್ತು. ಸಿಂಗರಿಸಿದ ಎತ್ತಿನಗಾಡಿಯಲ್ಲಿ ಗ್ರಾಮದಲ್ಲಿ ಮೆರವಣಿಗೆ ನಡೆಸುವುದರ ಜೊತೆಗೆ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಗುಲಾಬಿ ನೀಡಿ ಮಕ್ಕಳನ್ನು ಶಾಲೆಗೆ ಸ್ವಾಗತಿಸಿದ್ದು ಆಕರ್ಷಣೀಯವಾಗಿತ್ತು. ಶಾಲೆಯಲ್ಲಿ ತಳಿರು–ತೋರಣ ಜೊತೆಗೆ ಬಣ್ಣ ಬಣ್ಣದ ಟೇಪು, ಶಾಲಾ ಗೋಡೆಗಳ ಮೇಲೆ ಕಾಗದದ ಬಣ್ಣ ಬಣ್ಣದ ಚಿತ್ತಾರಗಳ ಅಲಂಕಾರದ ನಡುವೆ ಘೋಷವಾಕ್ಯಗಳು ನೋಡುಗರ ಮನಸೆಳೆದವು.

## ಬಡವರ ಜೇಬಿಗೆ ಕತ್ತರಿ ಹಾಕಿದ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ




ಸಾಗರ ರಾಜ್ಯದಲ್ಲಿ ಅನುದಾನ ಬಿಡುಗಡೆ ಆಗದೆ ಅಭಿವೃದ್ಧಿ ಕುಂಠಿತವಾಗಿರುವುದರ ನಡುವೆಯೇ ಪೆಟ್ರೋಲ್, ಡೀಸೆಲ್‌ಗಳ ದರವನ್ನೂ ಹೆಚ್ಚಿಸಿ, ಬಡವರ ಪರವಾಗಿದ್ದೇವೆ ಎನ್ನುವ ರಾಜ್ಯ ಸರಕಾರ ದರ ಏರಿಕೆ ಬರೆ ಹಾಕುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ನಡೆದಿದ್ದ ಪ್ರತಿಭಟನೆಯನ್ನು ತಾಲೂಕು ಕೇಂದ್ರದಲ್ಲೂ ನಡೆಸುತ್ತಿದ್ದೇವೆ ಎಂದು ನಗರ ಘಟಕದ ಅಧ್ಯಕ್ಷ ಗಣೇಶ ಪ್ರಸಾದ್ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೆಲವು ದಿನದ ಹಿಂದೆ ಜಿಲ್ಲಾ ಕೇಂದ್ರಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆ ವಿರೋಧಿಸಿ ನಡೆದಿದ್ದ ಪ್ರತಿಭಟನೆಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ತೈಲ ಬೆಲೆ ಹೆಚ್ಚಳದಿಂದ ಜನಸಾಮಾನ್ಯರ ದೈನಂದಿನ ಬದುಕಿಗೂ ಹೆಚ್ಚುಬರೆ ಬೀಳುತ್ತಿದ್ದು ಆಹಾರ ಪದಾರ್ಥಗಳು, ದಿನಬಳಕೆ ವಸ್ತುಗಳ ಬೆಲೆಯೂ ಹೆಚ್ಚಳವಾಗುತ್ತದೆ. ಜತೆಯಲ್ಲಿ ಸರಕಾರವು ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿರುವುದಲ್ಲದೆ, ಕೇಂದ್ರದ ಮೇಲೆ ಸುಳ್ಳು ಆರೋಪ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದರು.

ಪೆಟ್ರೋಲ್ ಬೆಲೆ ಹೆಚ್ಚಿರುವ ರಾಜ್ಯಗಳ ಪಟ್ಟಿಯನ್ನು ತೋರಿಸಿ ಜನರಿಗೆ ವಂಚಿಸುವ ಕೆಲಸದಲ್ಲಿ ತೊಡಗಿದೆ. ಆದರೆ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳು ಸೇರಿದಂತೆ ಗುಜರಾತ್, ಹರಿಯಾಣ, ಉತ್ತರ ಪ್ರದೇಶ, ದೆಹಲಿ, ಗೋವಾ, ಛತ್ತೀಸ್‌ಗಡಗಳ ಜತೆ ಹೋಲಿಕೆ ಮಾಡುತ್ತಿಲ್ಲ. ಬದಲಾಗಿ ತಮಿಳುನಾಡು, ಆಂದ್ರಪ್ರದೇಶ, ತೆಲಂಗಾಣ, ಹೀಗೆ ಎಲ್ಲಿ ಹೆಚ್ಚಿದೆಯೋ ಅಲ್ಲಿಗೆ ಮಾತ್ರ ಹೋಲಿಕೆ ಮಾಡುತ್ತಿದ್ದಾರೆ. ಇವುಗಳಲ್ಲಿ ಆಂದ್ರ ಹೊರತುಪಡಿಸಿದರೆ ಕಾಂಗ್ರೆಸ್ ನೇತೃತ್ವದ ಸರಕಾರವಿದೆ. ಹೀಗೆ ಸಿದ್ದರಾಮಯ್ಯನವರು ಸಮರ್ಥನೆಯ ಭರದಲ್ಲಿ ತಮ್ಮದೇ ಸರಕಾರವನ್ನು ದೂಷಿಸುತ್ತಿದ್ದಾರೆ. ಮುಖ್ಯವಾಗಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಇದೆಲ್ಲದಕ್ಕೂ ಮೌನವಾಗಿದ್ದಾರೆ.

ಇದರ ಅರ್ಥ ಎನು ಅವರಿಗು ಇದು ಇಷ್ಟ ವಿಲ್ಲ ಅನ್ನೂದು ಅವರ ಮಾತಿನಿಂದಲೆ ಗೊತ್ತಾಗುತ್ತದೆ. ವಿವಿಧ ರೀತಿಯಲ್ಲಿ ದರ ಹೆಚ್ಚಳ ಮಾಡಿರುವ ಜನವಿರೋಧಿ ಸರಕಾರದ ವಿರುದ್ಧ ಹೋರಾಡಲೇ ಬೇಕಾದ್ದು ಅನಿವಾರ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ ಬಿ.ಹೆಚ್. ರಸ್ತೆಯ ಶಿವಪ್ಪ ನಾಯಕ ವೃತ್ತದಲ್ಲಿ ರಸ್ತೆ ತಡೆದು, ಪ್ರತಿಭಟನೆ ನಡೆಸುತ್ತಿದ್ದೇವೆ ಎಂದರು. ಗ್ರಾಮಾಂತರ ಅಧ್ಯಕ್ಷ ದೇವೇಂದ್ರಪ್ಪ ಯಲಕುಂದ್ಲಿ, ಬಿಜೆಪಿ ಅಧಿಕಾರದಲ್ಲಿದ್ದಾಗ ಜನರಿಗೆ, ಬಡವರಿಗೆ ತೊಂದರೆಯಾಗುತ್ತದೆ ಎಂದು ಹೋರಾಟ ನಡೆಸಿದ್ದ ಕಾಂಗ್ರೆಸ್‌ನವರು ಈಗ ಮಾಡುತ್ತಿರುವುದೇನು? ಭಾಗ್ಯಗಳಿಂದ ತಮ್ಮ ಸರಕಾರ ಸಮೃದ್ಧವಾಗಿದೆ ಎಂದು ಹೇಳಿದ್ದವರು ಏಕಾಏಕಿ ಬೆಲೆ ಏರಿಕೆ ಮಾಡಿದ್ದೇಕೆ? ಇದನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಹೋರಾಟಕ್ಕೆ ತೀರ್ಮಾನಿಸಲಾಗಿದೆ. ಬೆಲೆ ಏರಿಕೆ ಹಿಂಪಡೆಯುವವರೆಗೂ ಅಭಿಯಾನದಂತೆ ಈ ಹೋರಾಟ ಮಾಡುತ್ತೇವೆ ಎಂದರು.

ಪ್ರಮುಖರಾದ ಪ್ರಸನ್ನ ಕೆರೆಕೈ, ರಮೇಶ ಹಾರೆಗೊಪ್ಪ, ಮಲ್ಲಿಕಾರ್ಜುನ ಹಕ್ರೆ, ಸುವರ್ಣ ಟೀಕಪ್ಪ, ಸುಮಾ, ರೂಪಾ ರಮೇಶ್, ಸಂತೋಷ್, ಸತೀಶ್ ಮೊಗವೀರ ಮೊದಲಾದವರಿದ್ದರು.

## ಶಾಲಾ ನವೀಕರಣ ಹಾಗೂ ಉದ್ಘಾಟನಾ ಕಾರ್ಯಕ್ರಮ

ಮಾಲೂರು: ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ, ಶಾಲೆ ತೊರಲಕ್ಕಿಯಲ್ಲಿ ಸುಮಾರು 4.50 ಲಕ್ಷಗಳಲ್ಲಿ ನವೀಕರಣಗೊಂಡ ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭ ಮಹೋತ್ಸವ ಅದ್ದೂರಿಯಾಗಿ ನಡೆಯಿತು.

ಶಾಲೆಯಲ್ಲಿ ಮಧ್ಯಾಹ್ನ ಬಿಸಿಯೂಟ ಸೇವಿಸುವ ಸ್ಥಳದಲ್ಲಿ ಸನ್ ರೂಫಿಂಗ್ ವ್ಯವಸ್ಥೆ, ಹಾಗೂ ನೆಲಕ್ಕೆ ಟೈಲ್ಸ್ ಹಾಕಿರುವುದು, ವಿಜ್ಞಾನದ ಪ್ರಯೋಗಾಲಯ, 100 ಲೀಟರ್ ಸಾಮರ್ಥ್ಯದ 2 ವಾಟರ್ ಫಿಲ್ಟರ್ ನೀಡಿರುವುದು. ಮುಖ್ಯವಾಗಿ ಎಲ್ಲಾ ಮಕ್ಕಳಿಗೆ ಬ್ಯಾಗ್ ಹಾಗೂ ಕಲಿಕಾ ಸಾಮಗ್ರಿಗಳನ್ನ ಈ ಸಂದರ್ಭದಲ್ಲಿ ನೀಡಲಾಯಿತು.

ಈ ಮೇಲಿನ ಕಾಮಗಾರಿಗಳಿಗೆ ದಾನಿಗಳಿಂದ 2.90 ಲಕ್ಷ ರೂ ಪಡೆಯಲಾಯಿತು ಹಾಗೂ ಇನ್ನುಳಿದ 1.60 ಲಕ್ಷ ರೂ ಅನ್ನು ನಮ್ಮ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 8 ಶಿಕ್ಷಕರು ನೀಡಿ ಶಾಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಜೊತೆಗೆ ಶಾಲೆಯ ಹಳೆಯ ವಿದ್ಯಾರ್ಥಿಗಳು ಧನ ಸಹಾಯ ಮಾಡಿದ್ದಾರೆ ಎಂದು ಮುಖ್ಯಶಿಕ್ಷಕರಾದ ನಂಜುಂಡಪ್ಪರವರು ತಿಳಿಸಿದರು.

ಈ ಮೇಲಿನ ಕಾಮಗಾರಿಗಳು ಆರ್ ಎಫ್ ಸಿ ಮತ್ತು ಎನ್ವೆಂಟ್ ಸಂಸ್ಥೆಯವರ



ಸಹಕಾರದಿಂದ ಆಗಿರುವುದು ಖುಷಿಯ ವಿಚಾರ ಎಂದರು.

ಈ ಸಂದರ್ಭದಲ್ಲಿ ಎನ್ವೆಂಟ್ ಸಂಸ್ಥೆಯ ಜನರಲ್ ಮ್ಯಾನೇಜರ್ ಆದಂತಹ ನಾಗರಾಜ್ ಅಯ್ಯರ್ ಮತ್ತು ಟೀಮ್ , ಆರ್ ಎಫ್ ಸಿ ಸಂಸ್ಥೆಯ ಮಧು ಮತ್ತು ಟೀಮ್,

ಶಾಲೆಯ ಮುಖ್ಯೋಪಾದ್ಯಾಯರಾದ ನಂಜುಂಡಪ್ಪ ಮತ್ತು ಸಿಬ್ಬಂದಿ ವರ್ಗ, ಎಸ್ ಡಿ ಎಂ ಸಿ ಅಧ್ಯಕ್ಷರು, ಸದಸ್ಯರು, ಹಿರಿಯ ವಿದ್ಯಾರ್ಥಿಗಳ ಅಧ್ಯಕ್ಷರು, ಸದಸ್ಯರು ತೊರಲಕ್ಕಿ ಸಂಕೀರ್ಣದ ಸಿ ಆರ್ ಪಿ ಪ್ರಕಾಶ್ ಹಾಗೂ ಸಂಕೀರ್ಣದ ಇತರೆ ಶಿಕ್ಷಕರು , ಗ್ರಾಮಸ್ಥರು ಹಾಜರಿದ್ದರು.

ವರದಿ: ಗೋಪಾಲಕೃಷ್ಣ,
ಮಾಲೂರು(ಕೋಲಾರ)


Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH